ಸಂಪುಟ : 9 ಸಂಚಿಕೆ 56 ಪುಟ : 4 ಬೆಲೆ: 3.00 ರವಿವಾರ ಮಾರ್ಚ್ 31 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 9 Issue : 56 Pages : 4 Price : 3.00 Sunday March 31 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

WALK IN INTERVIEW

Vacancy open

Bagalkot , Bijapur , Bidar , Kalaburgi, Mangalore , Belgaum

(Required For Bank Recovery and Collections)

- Filed collection Executive
- Two wheeler Must
- Salary up to 15000/- & Attractive Incentives Facility

Contact Number : 8310034934

ಆಸ್ತಿ ಮಾಲೀಕರುಗಳ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮಾಲೀಕರು/ಅನುಭೋಗದಾರರಿಗೆ ತಿಳಿಸುವುದೇನೆಂದರೆ, ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆಯ ಪ್ರಕಾರ ಮತ್ತು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಜಿಲ್ಲಾ ನೋಂದಣಾಧಿಕಾರಿಗಳ ಕಾರ್ಯಾಲಯದ ಅಧಿಸೂಚನೆ ಪ್ರಕಾರ ನಗರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿ ತೆರಿಗೆ ದರಗಳನ್ನು ವಸತಿ/ ವಾಣಿಜ್ಯ/ ಕೈಗಾರಿಕೆ/ ಖಾಲಿ ನಿವೇಶನಗಳಿಗೆ ಹಿರಿಯ ಉಪ ನೊಂದಣಾಧಿಕಾರಿಗಳ ಕಚೇರಿಯ ಪರಿಷ್ಕೃತ ಮಾರ್ಗಸೂಚಿ ಮೌಲ್ಯದ ದರಪಟ್ಟಿ ಆಧಾರದ ಮೇಲೆ ಆಸ್ತಿಗಳಿಗೆ ತೆರಿಗೆ ಭರಣಾ ಮಾಡಲು ಕೋರಿದೆ.

2024–25ನೇ ಸಾಲಿನ ಆಸ್ತಿ ತೆರಿಗೆ ಎಪ್ರಿಲ್ 1 ರಿಂದ 30 ರವರೆಗೆ ಪಾವತಿಸಿದಲ್ಲಿ ಶೇ 5 % ರಷ್ಟು ರಿಯಾಯತಿ ಪಡೆಯಬಹುದು. 2024–25ನೇ ಸಾಲಿನ ದಂಡ ರಹಿತ ಆಸ್ತಿ ತೆರಿಗೆ ಪಾವತಿಸಲು ಮೇ 1ರಿಂದ ಜೂನ್ 30ರವರೆಗೆ ಇರುತ್ತದೆ. ಜುಲೈ 1 ರಿಂದ ಆಸ್ತಿ ತೆರಿಗೆ ಮೇಲೆ ಪ್ರತಿ ತಿಂಗಳು ಶೇ 2 % ರಷ್ಟು ದಂಡ ವಿಧಿಸಿ ಆಸ್ತಿ ತೆರಿಗೆ ವಸೂಲಾತಿ ಮಾಡಲಾಗುವುದು.

ಸಾರ್ವಜನಿಕರು ಸಕಾಲದಲ್ಲಿ ಆಸ್ತಿ ತೆರಿಗೆ ಪಾವತಿಸಿ ಗದಗ–ಬೆಟಗೇರಿ ಅಭಿವೃದ್ಧಿಗೆ ಸಹಕರಿಸಲು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬುಕ್ ಆಫ್ ರೆಕಾರ್ಡ್ಸ್‌ಗೆ ಪು.ಬಡ್ನಿ ಗ್ರಾಮದ ಪುಟಾಣಿ ಭುವನ್ ಕೊರಕನವರ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಪು.ಬಡ್ನಿ ಗ್ರಾಮದ ಭುವನ್ ರವಿ ಕೊರಕನವರ ಎಂಬ ಪುಟ್ಟ ಪ್ರತಿಭೆ ತನ್ನದೇ ಆದ ವಿಶೇಷ ಜ್ಞಾನ, ಪ್ರತಿಭೆ ಪ್ರದರ್ಶಿಸುವ ಮೂಲಕ ಕರ್ನಾಟಕ ಅಚೀವರ್ಸ್ ಬುಕ್ ಆಫ್ ರೆಕಾರ್ಡ್ಸ್ ಸೇರುವದರೊಂದಿಗೆ ವಿಶೇಷ ಸಾಧನೆ ಮಾಡಿದ್ದಾನೆ.

2 ವರ್ಷ 7 ತಿಂಗಳ ವಯಸ್ಸಿನ ಬಾಲ ಪ್ರತಿಭೆ ಭುವನ್ ಅಸಾಮಾನ್ಯ ನೆನಪಿನ ಶಕ್ತಿ ಹೊಂದಿದ್ದಾನೆ. ಸಾಮಾನ್ಯ ಜ್ಞಾನದ ಅನೇಕ ಪ್ರಶ್ನೆಗಳಿಗೆ ತಕ್ಷಣವೇ ಉತ್ತರ ನೀಡುತ್ತಾನೆ.

ಅನೇಕ ಪ್ರಾಣಿಗಳು, ಪಕ್ಷಿಗಳು, ತರಕಾರಿಗಳು, ಹಣ್ಣುಗಳು, ಕ್ರೀಡಾ ಸಲಕರಣೆಗಳು ಹಾಗೂ ಗಣ್ಯ ವ್ಯಕ್ತಿಗಳು ಮತ್ತು ಗಣಿತ ಆಕೃತಿಗಳನ್ನು ಹೆಸರು ಸಮೇತ ಶರವೇಗದಲ್ಲಿ ಗುರುತಿಸುತ್ತಾನೆ. ವಾಹನಗಳ ಹೆಸರುಗಳು, ದೇಶದ ರಾಜ್ಯಗಳು ಹಾಗೂ ಅವುಗಳ ರಾಜಧಾನಿಗಳ ಹೆಸರುಗಳನ್ನು ಹೇಳುವ ಪುಟ್ಟ ಪೋರ, ಆರು ವಿಧದ ಸಂಸ್ಕೃತ ಶ್ಲೋಕಗಳನ್ನೂ ಹೇಳುವ ಮೂಲಕ ಎಂತವರನ್ನೂ ಹುಬ್ಬೇರಿಸುವಂತೆ ಮಾಡಿ ಬಡ್ನಿ ಗ್ರಾಮದ ಕೀರ್ತಿಯನ್ನು ಹೆಚ್ಚಿಸಿದ್ದಾನೆ. ಈತನ ಜ್ಞಾನ ಭಂಡಾರ ಹೆಚ್ಚಿಸುವಲ್ಲಿ ತಂದೆ–ತಾಯಿಗಳು ಅತ್ಯಂತ ಖುಷಿಯಿಂದ ಪ್ರೋತ್ಸಾಹ ನೀಡುತ್ತಿದ್ದಾರೆ. ಪುಟಾಣಿ ಪ್ರತಿಭೆಗೆ ಅನೇಕ ಗೌರವ ಪುರಸ್ಕಾರಗಳು ಲಭಿಸಿವೆ.

ನೀರಿಗಾಗಿ ಜಲಾಗಾರದ ಮೇಲೇರಿದ ಹಮಾಲರ ಕಾಲೋನಿ ನಿವಾಸಿಗಳು । ಅವ್ಯವಸ್ಥೆ ವಿರುದ್ಧ ಆಕ್ರೋಶ

ಚುನಾವಣಾ ಬಹಿಷ್ಕಾರದ ಎಚ್ಚರಿಕೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತುಂಗಭದ್ರಾ ನದಿ ನೀರು ಸರಬರಾಜು ಸ್ಥಗಿತಗೊಂಡಿದ್ದರಿಂದ ಪಟ್ಟಣದಲ್ಲಿ ದಿನೇ ದಿನೇ ನೀರಿನ ಸಮಸ್ಯೆ ಹೆಚ್ಚುತ್ತಿದ್ದು, ಜನರು ನೀರಿಗಾಗಿ ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ದಿನ ಬೆಳಗಾದರೆ ಕೊಡ ಹಿಡಿದು ಸಾರ್ವಜನಿಕ ನಳದ ಮುಂದೆ ನಿಲ್ಲುವುದು ಸಾಮಾನ್ಯವಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಶನಿವಾರ ಪಟ್ಟಣದ ಹಮಾಲರ ಕಾಲೋನಿ ಜನರು ನೀರಿಗಾಗಿ ಜಲಾಗಾರದ ಮೇಲೆಯೇ ಹತ್ತಿ ಹರಸಾಹಸ ಪಡುತ್ತಿದ್ದ ದೃಶ್ಯ ಕಂಡು ಬಂದಿತು.

ಜಲಾಗಾರದ ಮೇಲೆ ಕೆಳಗಿನಿಂದ ಕೊಡಗಳನ್ನು ಎಸೆಯುತ್ತಾ, ಹಗ್ಗಗಳ ಸಹಾಯದಿಂದ ನೀರು ಪಡೆಯಲು ಪ್ರಯತ್ನಿಸಿದರು. ನೀರಿಗಾಗಿ ಜಲಾಗಾರದ ಮೇಲೇರಿ ನೀರು ತರಲು ಹೋದಾಗ, ಜಲಾಗಾರದಲ್ಲಿಯೂ ನೀರಿಲ್ಲದ್ದರಿಂದ ಜನರು ಆಕ್ರೋಶಗೊಂಡು ಪುರಸಭೆ ವಿರುದ್ಧ ಹರಿಹಾಯ್ದು ಚುನಾವಣಾ ಬಹಿಷ್ಕರದ ಎಚ್ಚರಿಕೆ ನೀಡಿದರು.

ಈ ಕುರಿತು ಇಲ್ಲಿನ ನಿವಾಸಿಗಳಾದ ಸಾವಿತ್ರಿ ಕುರಿ, ತಿಪ್ಪವ್ವ, ಕೆಂಚಮ್ಮ ಸವಣೂರ, ರೇಣವ್ವ ಕುರಹಟ್ಟಿ, ಹಾಲಮ್ಮ ಮಳ್ಳೊಳ್ಳಿ ಮುಂತಾದವರು ಮಾತನಾಡಿ, ದೀಪದ ಕೆಳಗೆ ಕತ್ತಲು ಎನ್ನುವಂತೆ ನಾವಿರುವ ಪ್ರದೇಶದಲ್ಲಿಯೇ ಜಲಾಗಾರಗಳು, ಅನೇಕ ಬೋರ್‌ವೆಲ್‌ಗಳು ಇದ್ದರೂ ವರ್ಷದುದ್ದಕ್ಕೂ ನೀರಿಗಾಗಿ ಪರದಾಡಬೇಕಾದ ಪರಿಸ್ಥಿತಿಯಿದೆ. ದುಡಿಯುವ ವರ್ಗದ ಜನ ನಾವು, ದುಡ್ಡುಕೊಟ್ಟು ನೀರು ಹಾಕಿಸಿಕೊಳ್ಳುವ ಶಕ್ತಿ ನಮ್ಮಲ್ಲಿಲ್ಲ. ದಯವಿಟ್ಟು ಇಲ್ಲಿನ ಬಡ ಕುಟುಂಬಳಿಗೆ ನೀರು ಕೊಟ್ಟು ಪುಣ್ಯ ಕಟ್ಟಿಕೊಳ್ಳಿ. ನೀರು ನೀಡಿ ಇಲ್ಲವೇ ನಮ್ಮ ಕಾಲೋನಿಗೆ ಮತ ಕೇಳಲು ಬರಬೇಡಿ. ಹಲವಾರು ದಿವಸಗಳಿಂದ ನೀರಿನ ಸಮಸ್ಯೆಯ ಜತೆಗೆ ರಸ್ತೆ, ಬೆಳಕು ಸೇರಿ ಮೂಲಭೂತ ಸೌಲಭ್ಯಕ್ಕಾಗಿ ಕಂಡ ಕಂಡವರಲ್ಲಿ ಅಂಗಲಾಚುತ್ತಿದ್ದೇವೆ. ಹೀಗಾಗಿ, ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಮತದಾನ ಬಹಿಷ್ಕರಿಸುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೇ ಸೋಮವಾರ ಕೊಡ, ದನಕರುಗಳೊಂದಿಗೆ ಪುರಸಭೆಗೆ ಮುತ್ತಿಗೆ ಹಾಕುವದಾಗಿ ಎಚ್ಚರಿಕೆ ನೀಡಿದರು.

▸▸ 3ನೇ ಪುಟಕ್ಕೆ

ಹಮಾಲರ ಕಾಲೋನಿಯಲ್ಲಿಯೇ ಪಟ್ಟಣಕ್ಕೆ ನೀರು ಪೂರೈಸುವ 3 ಜಲಾಗಾರಗಳಿದ್ದು, ಶನಿವಾರ ಬೆಳಿಗ್ಗೆಯೇ ಮಹಿಳೆಯರು, ಪುರಷರು, ಮಕ್ಕಳು, ವಯಸ್ಸಾದವರು ನೀರಿಗಾಗಿ ಟ್ಯಾಂಕ್‌ಗಳಿಗೆ ಕೊಡಗಳ ಸಮೇತ ಮುಗಿಬಿದ್ದು, ನೀರು ತುಂಬಿಕೊಳ್ಳಲು ಹರಸಾಹಸ ಪಡುತ್ತಿದ್ದರು. ಆದರೆ, ಅದರಲ್ಲಿ ನೀರು ಸಹ ಇರದೇ ಇರುವದರಿಂದ ಹತಾಶೆಗೊಳಗಾದ ಜನರು ಪ್ರತಿಭಟನೆಗೆ ಇಳಿದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಚಿವ ಎಚ್.ಕೆ. ಪಾಟೀಲ

ಕೇಂದ್ರದ ನೋಟಿಸ್‌ಗೆ ಕಾಂಗ್ರೆಸ್ ಹೆದರದು

■ ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ದೊಡ್ಡ ದೊಡ್ಡ ಕುಳಗಳಿಂದ ಚುನಾವಣಾ ಬಾಂಡ್ ಮೂಲಕ ಹಣ ಪಡೆದು, ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು, ಅವರ ವಿರುದ್ಧದ ಕೇಸ್ ಹಿಂಪಡೆಯುತ್ತಿದ್ದಾರೆ. ಆ ಮೂಲಕ ಪ್ರಧಾನಿ ಮೋದಿ ಬಹುದೊಡ್ಡ ಭ್ರಷ್ಟಾಚಾರದಲ್ಲಿ ತೆ–ಡಗಿದ್ದಾರೆ ಎಂದು ಕಾನೂನು, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭ್ರಷ್ಟಾಚಾರಿಗಳು ಬಿಜೆಪಿ ಸೇರಿದ ನಂತರ ಅವರ ಕೇಸ್ ಖುಲಾಸೆ ಆಗುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಚುನಾವಣಾ ಆಯೋಗ ಈವರೆಗೆ ಬಿಜೆಪಿ ಚುನಾವಣೆ ಬಾಂಡ್ ಮೂಲಕ ಪಡೆದ ಹಣ ಮತ್ತು ಅವರ ವಿರುದ್ಧದ ತನಿಖೆಯ ಮಾಹಿತಿಯನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರಕಾರ ಚುನಾವಣೆ ಬಾಂಡ್ ಮೂಲಕ ಹಣ ಪಡೆಯುವುದಷ್ಟೇ ಅಲ್ಲದೇ, ಶೋಷಣೆ ಮೂಲಕವೂ ಹಣ ಪಡೆದಿದೆ. ಅಧಿಕೃತವಾಗಿಯೇ ಸಾವಿರಾರು ಕೋಟಿ ರೂ. ಪಡೆದಿರುವಾಗ, ಆಂತರಿಕವಾಗಿ ಎಷ್ಟು ಸಾವಿರ ಕೋಟಿ ಹಣ ಪಡೆದಿರಬಹುದು ಎಂಬುದನ್ನು ಊಹಿಸಲು ಸಾಧ್ಯವಿಲ್ಲ ಎಂದು ಆಪಾದಿಸಿದರು.

ಈ ಸಂದರ್ಭದಲ್ಲಿ ಗದಗ–ಬೆಟಗೇರಿ ಶಹರ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಬಿ.ಬಿ. ಅಸೂಟಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಿದ್ದಲಿಂಗೇಶ ಪಾಟೀಲ, ಗದಗ ಜಿಲ್ಲಾ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಶೋಕ ಮಂದಾಲಿ, ಮುಖಂಡ ಚನ್ನಪ್ಪ ಜಗಲಿ ಉಪಸ್ಥಿತರಿದ್ದರು.

ಒಂದು ದೊಡ್ಡ ರಾಷ್ಟ್ರೀಯ ರಾಜಕೀಯ ಪಕ್ಷ (ಬಿಜೆಪಿ) ವಿರೋಧ ಪಕ್ಷದವರ ಹಳೆಯ ಕೇಸ್ ಹೊರ ತಗೆದು 1800 ಕೋಟಿ ರೂ ದಂಡ ಪಾವತಿಸಬೇಕು ಎಂದು ನೋಟಿಸ್ ನೀಡಿರುವುದು ಸರಿಯಾದ ಕ್ರಮ ಅಲ್ಲ. ಭಯ ಹುಟ್ಟಿಸುವ ನಿಮ್ಮ ಕೆಲಸಕ್ಕೆ ಯಾರೂ ಅಂಜುವುದಿಲ್ಲ. ಅವರ ನೋಟಿಸ್‌ಗೆ ಕಾಂಗ್ರೆಸ್ ಹೆದರುವುದಿಲ್ಲ. 30ವರ್ಷದ ಹಿಂದಿನ ನೋಟಿಸ್ ಅನ್ನು ಚುನಾವಣೆ ಸಮಯದಲ್ಲಿ ಯಾಕೆ ನೀಡಿದರು, ಇಷ್ಟು ದಿನ ಯಾಕೆ ನೀಡಲಿಲ್ಲ? ಇದಕ್ಕೆ ತಕ್ಕ ಉತ್ತರವನ್ನು ಜನ ನೀಡುತ್ತಾರೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ವಿಶೇಷಚೇತನರ ಮೂಲಕ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮ

ಕಡ್ಡಾಯ ಮತದಾನ ಪ್ರಜಾಪ್ರಭುತ್ವದ ಬುನಾದಿ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಮೇ 7ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯ ಮತದಾನದ ಮೂಲಕ ಪ್ರಜಾಪ್ರಭುತ್ವದ ಬುನಾದಿಯನ್ನು ಗಟ್ಟಿಗೊಳಿಸಬೇಕು ಎಂದು ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ತಾಲೂಕು ಸ್ವೀಪ್ ಸಮಿತಿ ಅಧ್ಯಕ್ಷ ವಿಶ್ವನಾಥ ಹೊಸಮನಿ ಹೇಳಿದರು.

ಮುಂಡರಗಿ ಪಟ್ಟಣದ ತಾ.ಪಂ ಆವರಣದಲ್ಲಿ ಗದಗ ಜಿಲ್ಲಾ ಮತ್ತು ಮುಂಡರಗಿ ತಾಲೂಕು ಚುನಾವಣೆ ಸ್ವೀಪ್ ಸಮಿತಿ, ತಾ.ಪಂ ಮುಂಡರಗಿ ವತಿಯಿಂದ ಹಮ್ಮಿಕೊಂಡಿದ್ದ ವಿಶೇಷಚೇತನರ ಮೂಲಕ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ತಹಸೀಲ್ದಾರ ಧನಂಜಯ ಕುಂಬ್ಳೆ ಅವರೊಂದಿಗೆ ಜಂಟಿಯಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಜಾಥಾದಲ್ಲಿ ಭಾಗವಹಿಸಿ ಮಾತನಾಡಿದ ತಹಸೀಲ್ದಾರ ಧನಂಜಯ ಮಾಲಗತ್ತಿ, ಸಾರ್ವಜನಿಕರು ಮತದಾನದಿಂದ ವಿಮುಖರಾಗದೆ ಕಡ್ಡಾಯವಾಗಿ ಮತ ಚಲಾಯಿಸುವ ಮೂಲಕ ಜವಾಬ್ದಾರಿ ಮೆರೆಯಬೇಕು. ಮುಂಡರಗಿ ತಾಲೂಕಿನ ಎಲ್ಲ ಗ್ರಾಮಗಳಲ್ಲೂ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಮತದಾನ ಸಂವಿಧಾನ ನಮಗೆ ನೀಡಿರುವ ಅಮೂಲ್ಯ ಹಕ್ಕು. ಆಸೆ–ಆಮಿಷಗಳಿಗೆ ಒಳಗಾಗದೆ ಉತ್ತಮ ಎನಿಸಿದ ಅಭ್ಯರ್ಥಿಗೆ ಮತ ಚಲಾಯಿಸುವ ಕೆಲಸ ನಮ್ಮ ಪ್ರಮುಖ ಆದ್ಯತೆಯಾಗಬೇಕು. ಈ ಸಾರಿಯ ಲೋಕಸಭಾ ಚುನಾವಣೆಯಲ್ಲಿ ನಮ್ಮ ಮತದಾನದ ಪ್ರಮಾಣ ನೂರರಷ್ಟಾದರೆ ಮತದಾನದ ಪ್ರಾಮುಖ್ಯತೆಗೆ ಅರ್ಥ ಬರುತ್ತದೆ. ಆ ಕಾರಣಕ್ಕಾಗಿ ಮತ ಚಲಾಯಿಸುವ ಮೂಲಕ ಸಂವಿಧಾನ ನಮಗೆ ನೀಡಿರುವ ಹಕ್ಕನ್ನು ತಪ್ಪದೇ ಚಲಾಯಿಸಬೇಕು ಎಂದರು.

ಪಟ್ಟಣದ ತಾ.ಪಂ ಆವರಣದಿಂದ ಆರಂಭವಾದ ಮತದಾನ ಜಾಗೃತಿ ವಿಶೇಷಚೇತನರ ಬೈಕ್ ಜಾಥಾ ಬೃಂದಾವನ ವೃತ್ತ, ಮೇನ್ ಬಜಾರ್, ಬಸ್ ನಿಲ್ದಾಣ ಮಾರ್ಗವಾಗಿ ಸಂಚರಿಸುತ್ತಾ ಮತದಾನ ಜಾಗೃತಿ ಕುರಿತಾದ ವಿಶೇಷ ಘೋಷಣೆಗಳನ್ನು ಕೂಗುವುದರೊಂದಿಗೆ ಸಾರ್ವಜನಿಕರಲ್ಲಿ ಕಡ್ಡಾಯ ಮತದಾನದ ಬಗ್ಗೆ ಅರಿವು ಮೂಡಿಸಲಾಯಿತು.

ಜಾಥಾದಲ್ಲಿ ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಪ್ರವೀಣ್ ಗೋಣೆಮ್ಮನವರ, ಪಿಡಿಓ ಫಕ್ರುದ್ದೀನ್ ನದಾಫ, ತಾ.ಪಂ ಸಿಬ್ಬಂದಿಗಳು ಇದ್ದರು.

ಆನಂದಸ್ವಾಮಿ ಗಡ್ಡದೇವರಮಠ ಪರ ಜಿ.ಎಸ್. ಪಾಟೀಲ ಮತ ಯಾಚನೆ

ನಾವು ನುಡಿದಂತೆ ನಡೆದಿದ್ದೇವೆ

■ ವಿಜಯಸಾಕ್ಷಿ ಸುದ್ದಿ, ರೋಣ

ಹಾವೇರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಗೆಲುವು ಗ್ಯಾರಂಟಿಯಾಗಿದೆ ಎಂದು ಶಾಸಕ ಹಾಗೂ ಖನಿಜ ನಿಗಮದ ಅಧ್ಯಕ್ಷ ಜಿ.ಎಸ್. ಪಾಟೀಲ ಹೇಳಿದರು.

ಅವರು ನಿಡಗುಂದಿ, ಹಾಲಕೇರಿ, ಮಾರನಬಸರಿ ಗ್ರಾಮಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠರ ಪರವಾಗಿ ಮತಯಾಚನೆ ಮಾಡಿ, ಮಾತನಾಡಿದರು.

ಕಳೆದ 10 ವರ್ಷಗಳ ಕಾಲ ಆಡಳಿತ ನಡೆಸಿದ ಕೇಂದ್ರ ಬಿಜೆಪಿ ಸರಕಾರ ಜನಸಾಮಾನ್ಯರಿಗೆ ಹಾಗೂ ರೈತರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಜಾರಿಗೆ ತರದೆ ಕಾಲಹರಣ ಮಾಡಿದ್ದು ನಿಜಕ್ಕೂ ದುರಂತವೇ ಸರಿ. ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ರಚನೆಯಾಗುವ ಎಲ್ಲ ಲಕ್ಷಣಗಳು ಗೋಚರವಾಗಿದ್ದು, ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ರೀತಿಯಲ್ಲಿ ಬೆಂಬಲಿಸಬೇಕು ಎಂದ ಅವರು, ನಾವು ನುಡಿದಂತೆ ನಡೆದಿದ್ದೇವೆ. ಹೀಗಾಗಿ, ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಿ ಎಂದರು.



ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ಮಾತನಾಡಿ, ಹಾವೇರಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಯೋಜನೆಗಳ ಬಗ್ಗೆ ಮತದಾರರು ಹೆಮ್ಮೆ ವ್ಯಕ್ತಪಡಿಸುತ್ತಿದ್ದಾರೆ. ರಾಜ್ಯ ಸರಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ, ಕಾರ್ಮಿಕರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಇದರಿಂದ ನಾವು ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸುತ್ತೇವೆ ಎನ್ನುವ ಮಾತುಗಳು ಕೆಳಿಬರುತ್ತಿರುವುದು ಸ್ವಾಗಹರ್ತವಾಗಿದೆ. ಹಾವೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಖಚಿತವಾಗಿದ್ದು, ಮತದಾರರು ಹೆಚ್ಚಿನ ಮತಗಳನ್ನು ಕಾಂಗ್ರೆಸ್ ಪಕ್ಷದ ಗುರುತಿಗೆ ನೀಡಬೇಕು. ನಾನು ಸಹ ನಿಮ್ಮ ಮನೆಯ ಮಗನಾಗಿದ್ದು, ಆಶೀರ್ವದಿಸಿ ಎಂದು ಮನವಿ ಮಾಡಿದರು.

ಇದೇ ಸಂಧರ್ಭದಲ್ಲಿ ಗ್ರಾಮದ ಮುಖಂಡರು ಆನಂದಸ್ವಾಮಿ ಗಡ್ಡದೇವರಮಠರವರನ್ನು ಸನ್ಮಾನಿಸಿದರು. ಸಂಗನಗೌಡ ಪಾಟೀಲ, ವ್ಹಿ.ಆರ್. ಗುಡಿಸಾಗರ, ವ್ಹಿ.ಬಿ. ಸೋಮನಕಟ್ಟಿಮಠ, ಸಿದ್ದಣ್ಣ ಬಂಡಿ, ಎಚ್.ಎಸ್. ಸೋಂಪುರ, ವೀರಪ್ಪ ಬಿಚ್ಚೂರ, ಶರಣಪ್ಪ ಕುರಿ, ಈರಣ್ಣ ನಿಡಗುಂದಿ, ಅಂದಪ್ಪ ಬಿಚ್ಚೂರ, ರೈಮಾನಸಾಬ ಮೋತಿಖಾನ್, ಶಿವಪ್ಪ ಜಾಲಿಹಾಳ, ಪರಸಪ್ಪ ತಳವಾರ, ಶಂಕ್ರಪ್ಪ ಸರ್ವಿ, ಶಿವಣ್ಣ ಸೂಡಿ, ಎಸ್.ಎಚ್. ಹಾದಿಮನಿ, ಅಂದಪ್ಪ ಚಲವಾದಿ, ಶರಣಪ್ಪ ಬೆಟಗೇರಿ, ಗೋವಿಂದಪ್ಪ ಪೂಜಾರ, ನಬೀಸಾಬ ಕೋಟೆಕಲ್, ಪಕ್ಕೀರಪ್ಪ ಕುಕನೂರ, ಬಾಬು ಮುಲ್ಲಾ, ಕುಬೇರಪ್ಪ ಗಡಾದ, ಗೀತಾ ಕುಕನೂರ, ಸುಮಂಗಲಾ ಶೇಬಗೊಂಡ, ಶಾಂತವ್ವ ಕಂಬಳಿ, ದಿಲ್‌ಶ್ಯಾದ್ ದೋಟಿಹಾಳ, ರಿಯಾಜ್ ಆಲೂರ, ಡಿ.ಡಿ. ದೋಟಿಹಾಳ, ಮಹ್ಮದ ಸವಡಿ, ಕಲ

ಸಂಪಾದಕೀಯ

ಸಾಹಿತಿ ಎಸ್.ಎಲ್. ಭೈರಪ್ಪ ರಾಜಕೀಯ ವಿಮರ್ಶೆ

ಸಾಹಿತಿ ಎಸ್ ಎಲ್ ಭೈರಪ್ಪ ರಾಜಕೀಯ ವಿಷಯದ ಕುರಿತು ವಿಮರ್ಶೆ ಮಾಡಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಈ ಬಾರಿ ಬಿಜೆಪಿ ಕಡಿಮೆ ಸ್ಥಾನಗಳನ್ನ ಗೆಲ್ಲಲಿದೆ. ಕರ್ನಾಟಕ ಕಾಂಗ್ರೆಸ್ ಬಲಿಷ್ಠವಾಗಿದೆ ಎಂದು ತಮ್ಮ ಅನುಭವದ ಆಧಾರದಲ್ಲಿ ಅಭಿಪ್ರಾಯವನ್ನು ದಾಖಲಿಸಿದ್ದಾರೆ.

ಬಲಪಂಥೀಯ ವಿಚಾರಧಾರೆಗಳನ್ನು ಹೊಂದಿರುವ ಎಸ್ ಎಲ್ ಭೈರಪ್ಪ ಬಿಜೆಪಿಯನ್ನು ಬೆಂಬಲಿಸುತ್ತಾರೆ, ಹಿಂದುತ್ವದ ಪ್ರತಿಪಾದಕರು ಎಂದೆಲ್ಲ ಒಂದು ವರ್ಗದ ಸಾಹಿತಿಗಳು ಅವರ ವಿರುದ್ಧ ಈ ಹಿಂದೆ ಅನೇಕ ಬಾರಿ ಟೀಕೆಗಳನ್ನ ಮಾಡಿದ್ದಾರೆ.

ಭೈರಪ್ಪ ಆ ಎಲ್ಲ ಟೀಕೆಗಳಿಗೆ ಉತ್ತರ ಕೊಡದೆ, ಅವಕಾಶ ಸಿಕ್ಕಾಗಲೆಲ್ಲ ರಾಜಕೀಯದ ಮಾತುಗಳನ್ನು ಆಡಿದ್ದಾರೆ. ಸದ್ಯದ ರಾಜಕೀಯ ವಿಮರ್ಶೆಯನ್ನ ಗಮನಿಸುವುದಾದರೆ, ಬಿಜೆಪಿ ಕಡಿಮೆ ಸ್ಥಾನಗಳನ್ನ ಗೆಲ್ಲಲು ಕಾರಣಗಳೇನು ಮತ್ತು ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನ ಗಳಿಸಲು ಪೂರಕವಾದ ಅಂಶಗಳು ಏನು ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಬಿಜೆಪಿ ಅಧಿಕಾರವಧಿಯಲ್ಲಿ ಅಧಿಕಾರಿಗಳ ಮೇಲೆ ಹಿಡಿತ ಇರಲಿಲ್ಲ. ಉತ್ತರ ಪ್ರದೇಶ ಮಾದರಿಯ ಆಡಳಿತ ನೀಡಲಿಲ್ಲ. ಆ ಕಾರಣಕ್ಕಾಗಿ ಬಿಜೆಪಿ ಈ ಬಾರಿ ಕಡಿಮೆ ಸೀಟುಗಳನ್ನು ಗೆಲ್ಲಲಿದೆ ಎಂದಿದ್ದಾರೆ. ಇನ್ನೂ ಕಾಂಗ್ರೆಸ್ ಸದ್ಯ ಬಲಿಷ್ಠವಾಗಿದೆ. ಅಧಿಕಾರಿಗಳ ಮೇಲೆ ಉತ್ತಮ ಹಿಡಿತ ಹೊಂದಿದ್ದಾರೆ. ಆಡಳಿತ ಯಂತ್ರ ಸುಗಮವಾಗಿ ನಡೆಯುತ್ತಿದೆ. ಈ ಕಾರಣಕ್ಕಾಗಿ ಕರ್ನಾಟಕದಲ್ಲಿ ಈ ಬಾರಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನ ಗೆಲ್ಲಲಿದೆ. ಆದರೆ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಲಿದ್ದಾರೆ ಎನ್ನುವುದನ್ನು ಉಲ್ಲೇಖಿಸಿದ್ದಾರೆ.

ಸಾಹಿತಿ ಭೈರಪ್ಪ ಅವರ ಈ ರಾಜಕೀಯ ವಿಮರ್ಶೆ ಬಹುತೇಕ ಸತ್ಯಾಂಶಗಳನ್ನ ಒಳಗೊಂಡಿದೆ. ರಾಜ್ಯ ಬಿಜೆಪಿಯಲ್ಲಿನ ಗೊಂದಲ ಬಿಜೆಪಿಯ ಓಟಕ್ಕೆ ಬ್ರೇಕ್ ಹಾಕಲಿದೆ. ಇನ್ನು ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ಮತ ಪಡೆಯುವ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್ ಹೆಚ್ಚು ಆತ್ಮವಿಶ್ವಾಸದಿಂದ ಕೂಡಿದೆ.

ಇದೆಲ್ಲವನ್ನು ಗಮನಿಸಿದಲ್ಲಿ ಸಾಹಿತಿ ಎಸ್.ಎಲ್ ಭೈರಪ್ಪ ಅವರ ವಿಮರ್ಶೆ ಮತ್ತು ಭವಿಷ್ಯ ನಿಜವಾಗುವ ಎಲ್ಲ ಲಕ್ಷಣಗಳಿವೆ.

ಪ್ರಜಾಪ್ರಭುತ್ವದಲ್ಲಿ ಮತದಾನದ ಪ್ರಾಮುಖ್ಯತೆ

ಮತದಾನ ಮಾಡಿದವನೇ ಮಹಾಶೂರ

ಗ್ರೀಕ್ ರಾಜನೀತಿಜ್ಞ ಪೆರಿಕಲ್ಸ್ ಹೇಳಿದಂತೆ `Just because you don't take interest in politics doesn't mean that politics won't take an interest in you' ಅಂದರೆ, ನೀವು ರಾಜಕೀಯದಲ್ಲಿ ಆಸಕ್ತಿ ವಹಿಸದ ಕಾರಣ ರಾಜಕೀಯವು ನಿಮ್ಮ ಬಗ್ಗೆ ಆಸಕ್ತಿ ವಹಿಸುವುದಿಲ್ಲ ಎಂದು ಅರ್ಥವಲ್ಲ.

ನಾವು ದಿನನಿತ್ಯ ನಮ್ಮ ಸ್ನೇಹಿತರು, ಕುಟುಂಬ ಸೇರಿದಂತೆ ಸಹೋದ್ಯೋಗಿಗಳೊಂದಿಗೆ ಮಾತನಾಡುವಾಗ ನಮ್ಮ ದೇಶದಲ್ಲಿ ಶಿಕ್ಷಣ ವ್ಯವಸ್ಥೆ, ಆರ್ಥಿಕತೆ, ಜಿಡಿಪಿ ಸೇರಿದಂತೆ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಸರಿಯಿಲ್ಲ ಎನ್ನುವುದು ಸರ್ವೇಸಾಮಾನ್ಯ. ಆದರೆ ಈ ಎಲ್ಲಾ ಕ್ಷೇತ್ರಗಳನ್ನು ಸರ್ಕಾರವೇ ನಿರ್ವಹಿಸುವುದರಿಂದ ಸರ್ಕಾರ ತೆಗೆದುಕೊಳ್ಳುವ ನಿರ್ಧಾರ ನೇರವಾಗಿ ನಮ್ಮ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ನಮ್ಮಿಂದ ವ್ಯವಸ್ಥೆಗೆ ಪರಿಣಾಮ ಬೀಳಬೇಕೆಂದರೆ ಅದು ಕೇವಲ ನಾವು 5 ವರ್ಷಕೊಮ್ಮೆ ಚಲಾಯಿಸುವ ಮತದಾನದ ಮೂಲಕ ಮಾತ್ರ ಸಾಧ್ಯ.

ಮತದಾರನ ಪಾತ್ರವು ಪ್ರಜಾತಂತ್ರದ ಸಿದ್ಧಾಂತದಲ್ಲಿ ಅತ್ಯಂತ ಮುಖ್ಯವಾದ ಮೂಲಭೂತ ಅಂಗ. ಮತದಾನ ಪ್ರಕ್ರಿಯೆ ಪ್ರಜಾತಂತ್ರದ ಆಧಾರದ ಮೇಲೆ ನಿಂತಿದ್ದು, ನಾಗರಿಕರು ತಮ್ಮ ಜನಪ್ರತಿನಿಧಿಗಳನ್ನು ಆರಿಸಲು ಅವರಿಗೆ ಹಕ್ಕು ನೀಡುತ್ತದೆ. ಈ ಪ್ರಕ್ರಿಯೆಯ ಮೂಲಕ ಜನಸಾಮಾನ್ಯರು ತಮ್ಮ ನೇತಾರರನ್ನು ಆರಿಸುವ ಅಧಿಕಾರವನ್ನು ಹೊಂದುತ್ತಾರೆ. ಇದು ಒಂದು ಸಮಾನ ಹಕ್ಕು. ಮತದಾನದ ಮೂಲಕ ನಾಗರಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಿದ್ದು, ಇದು ಸಾರ್ವಜನಿಕ ನ್ಯಾಯವ್ಯವಸ್ಥೆಯ ನಿರ್ಧಾರಕ್ಕೆ ಪ್ರಮುಖ ಮೂಲ.

ಹೀಗೆ ನಡೆಯುವ ಪ್ರಕ್ರಿಯೆ ದೇಶದ ನೇತೃತ್ವ ಮತ್ತು ನ್ಯಾಯವ್ಯವಸ್ಥೆಗೆ ಜನರ ಸಮ್ಮತಿಯನ್ನು ಸಾರ್ವಜನಿಕವಾಗಿ ಹೊಂದಿಸುತ್ತದೆ. ಇದರ ಫಲಿತಾಂಶವಾಗಿ ದೇಶದ ಸಾರ್ವಜನಿಕ ನಾಗರಿಕತೆ ಮತ್ತು ನೀತಿಯ ಸ್ಥಿತಿ ಹೆಚ್ಚುತ್ತದೆ. ಮತದಾರನ ಪಾತ್ರವು ಒಂದು ಪ್ರಜಾತಂತ್ರದಲ್ಲಿ ಹೆಚ್ಚಾದ ಮಹತ್ವದಿಂದಾಗಿದೆ. ಮತದಾನ ಪ್ರಕ್ರಿಯೆ ದೇಶದ ನ್ಯಾಯವ್ಯವಸ್ಥೆಯ ನಿರ್ಧಾರಕ್ಕೆ ಹಾಗೂ ನೇತೃತ್ವಕ್ಕೆ ಮುಖ್ಯವಾದ ಅಂಗವಾಗಿದೆ. ಇದು ನಾಗರಿಕ ಸಮಾಜದ ಸಾಕ್ಷರತೆ, ನೈತಿಕತೆ, ಹೊಸ ಹಾಗೂ ಸಮಾಜಶಾಸ್ತ್ರದ ಅಭಿವೃದ್ಧಿಗೆ ಕೂಡ ಸಹಾಯ ಮಾಡುತ್ತದೆ.

ಮತದಾನದ ಪಾತ್ರವು ಸಮಾಜದ ಹಾಗೂ ರಾಜಕೀಯ

ವ್ಯವಸ್ಥೆಯ ನಡುವೆ ಒಂದು ದೊಡ್ಡ ಸಂಬಂಧ ಉಂಟುಮಾಡುತ್ತದೆ. ಸಮಾಜದ ವಿಶೇಷಾಂಗಗಳನ್ನು ಪ್ರತಿಬಿಂಬಿಸುತ್ತದೆ ಹಾಗೂ ಪ್ರಜಾತಂತ್ರದ ಆತ್ಮಭರಣಗಳನ್ನು ನಿರ್ಮಿಸುತ್ತದೆ. ಮತದಾನವು ಪ್ರಜಾತಂತ್ರದ ಆಧಾರವಾಗಿರುತ್ತದೆ. ಏಕೆಂದರೆ ಇದು ನಾಗರಿಕರ ನಿಯಮಿತ ಸಂಪರ್ಕ ಕೂಡಿದ ವಿಚಾರ ವ್ಯಕ್ತಿತ್ವಗಳನ್ನು ರಚಿಸುತ್ತದೆ ಹಾಗೂ ಭಾಗವಹಿಸಿದವರು ನೇತೃತ್ವ ವಹಿಸುವ ನಿರೀಕ್ಷೆಯನ್ನು ಬೆಳೆಸುತ್ತದೆ.

ಮತದಾನವು ವೈವಿಧ್ಯಮಯವಾದ ಸಮಾಜದಲ್ಲಿ ಸಾಮರಸ್ಯ ಮತ್ತು ಒಗ್ಗಟ್ಟನ್ನು ಉಂಟುಮಾಡಿ, ಸಮಾಜ ಸಂಘಟನೆಯ ಮೂಲಕ ಆದ್ಯತೆ ಹೊಂದಿರುತ್ತದೆ. ಇದು ನಾಗರಿಕ ಶಿಕ್ಷಣದ ಅಂಶವಾಗಿದ್ದು, ಜನಸಾಮಾನ್ಯರನ್ನು ಸಾರ್ವಜನಿಕ ಸಂಬಂಧಗಳ ಸ್ಥಿತಿಗೆ ಪರಿಚಯಿಸುತ್ತದೆ ಹಾಗೂ ಅವರ ಅಭಿವೃದ್ಧಿಗೆ ಕೊಡುವ ಅವಕಾಶವಾಗಿದೆ.

ದೇಶದ ಅಭಿವೃದ್ಧಿಗಾಗಿ ಉತ್ತಮ ನಾಯಕನ ಆಯ್ಕೆ ಮಾಡುವುದು ನಮ್ಮ ಹಕ್ಕು ಮತ್ತು ಕರ್ತವ್ಯವಾಗಿದೆ. ಜಿಲ್ಲೆಯಲ್ಲಿ ಮೇ 7ರಂದು ನಡೆಯುವ 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದಿಂದ ದೂರ ಉಳಿಯದೇ ಯಾವುದೇ ಆಸೆ-ಆಮಿಷಗಳಿಗೆ ಬಲಿಯಾಗದೆ ಜಾಗೃತರಾಗಿ ಮತ ಚಲಾಯಿಸಿ, ನೆರೆಹೊರೆಯವರನ್ನು ಮತದಾನ ಮಾಡಲು ಪ್ರೋತ್ಸಾಹಿಸಿ ಎಲ್ಲರೂ ತಪ್ಪದೇ ಮತಚಲಾಯಿಸೋಣ.

– ವಿನಾಯಕ ಭಾವಿಮನಿ
ಅಪ್ರೆಂಟಿಸ್, ವಾರ್ತಾ ಮತ್ತು ಸಾ.ಸಂ. ಇಲಾಖೆ, ಗದಗ.

ಮತದಾನ ಬಗ್ಗೆ ಮಹನೀಯರ ಅಭಿಪ್ರಾಯ

* ಮತಪತ್ರವು ಬುಲೆಟ್‌ಗಿಂತ ಪ್ರಬಲವಾಗಿದೆ. – ಅಬ್ರಹಾಂ ಲಿಂಕನ್.
* ತಮ್ಮ ಆಯ್ಕೆಯನ್ನು ವ್ಯಕ್ತಪಡಿಸುವವರು ಬುದ್ಧಿವಂತಿಕೆಯಿಂದ ಆಯ್ಕೆ ಮಾಡಲು ಸಿದ್ಧರಾಗದ ಹೊರತು ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವದ ನಿಜವಾದ ರಕ್ಷಣೆ ಶಿಕ್ಷಣವಾಗಿದೆ. – ಫ್ರಾಂಕ್ಲಿನ್ ಡಿ.ರೂಸ್ವೆಲ್ಟ್.
* ಮತವಿಲ್ಲದ ಮನುಷ್ಯ ರಕ್ಷಣೆಯಿಲ್ಲದ ಮನುಷ್ಯ. – ಲಿಂಡನ್ ಬಿ.ಜಾನ್ಸನ್.
* ನಾವು ಮುಖ್ಯವಾದ ವಿಷಯಗಳ ಬಗ್ಗೆ ಮೌನವಾಗಿರುವ ದಿನ ನಮ್ಮ ಜೀವನವು ಕೊನೆಗೊಳ್ಳಲು ಪ್ರಾರಂಭಿಸುತ್ತದೆ. – ಮಾರ್ಟಿನ್ ಲೂಥರ್ ಕಿಂಗ್.
* ಯಾವಾಗಲೂ ತತ್ವಕ್ಕಾಗಿ ಮತ ಚಲಾಯಿಸಿ, ಆದರೂ ನೀವು ಏಕಾಂಗಿಯಾಗಿ ಮತ ಚಲಾಯಿಸಬಹುದು ಮತ್ತು ನಿಮ್ಮ ಮತವನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ ಎಂಬ ಮಧುರವಾದ ಪ್ರತಿಬಿಂಬವನ್ನು ನೀವು ಪಾಲಿಸಬಹುದು. – ಜಾನ್ ಕ್ವಿನ್ಸಿ ಆಡಮ್ಸ್.
* ನಮಗೆ ಬಹುಮತದ ಸರ್ಕಾರ ಇಲ್ಲ. ಭಾಗವಹಿಸುವ ಬಹುಮತದಿಂದ ನಮ್ಮ ಸರ್ಕಾರವಿದೆ. – ಥಾಮಸ್ ಜೆಫರ್ಸನ್.
* ಪ್ರಜಾಪ್ರಭುತ್ವದಲ್ಲಿ ಒಬ್ಬ ಮತದಾರನ ಅಜ್ಞಾನ ಎಲ್ಲರ ಭದ್ರತೆಯನ್ನು ಕುಗ್ಗಿಸುತ್ತದೆ. – ಜಾನ್ ಎಫ್. ಕೆನಡಿ.
* ಮತವು ರೈಫಲ್ನಂತೆ. ಅದರ ಉಪಯುಕ್ತತೆಯು ಬಳಕೆದಾರರ ಪಾತ್ರವನ್ನು ಅವಲಂಬಿಸಿರುತ್ತದೆ. – ಥಿಯೋಡರ್ ರೂಸ್ವೆಲ್ಟ್.

ಬೀಚಿ ಬಳಗದ ಮಾಸಿಕ ಸಭೆಯಲ್ಲಿ ಡಿ.ಎ. ಅರವಟಗಿಮಠ

ಲೋಕಜ್ಞಾನ ಅರಿಯಲು ಪ್ರವಾಸ ಅವಶ್ಯಕ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನಮ್ಮ ಹಿರಿಯರು 'ಕೋಶ ಓದು-ದೇಶ ಸುತ್ತು' ಎಂದು ಹೇಳಿರುವುದರಲ್ಲಿ ಅರ್ಥವಿದೆ. ನಾವು ಲೋಕ ಜ್ಞಾನವನ್ನು ಪಡೆಯಬೇಕೆಂದರೆ ಪ್ರವಾಸ ಅವಶ್ಯಕವಾಗಿದೆ ಎಂದು ನರೇಗಲ್ಲ ನಿವೃತ್ತ ನೌಕರರ ಸಂಘದ ಅಧ್ಯಕ್ಷ, ನಿವೃತ್ತ ಪ್ರಾಚಾರ್ಯ ಡಿ.ಎ. ಅರವಟಗಿಮಠ ಹೇಳಿದರು.

ಪಟ್ಟಣದ ಹಿರೇಮಠದ ಸಭಾಭವನದಲ್ಲಿ ಇತ್ತೀಚೆಗೆ ಜರುಗಿದ ಬೀಚಿ ಬಳಗದ ಮಾಸಿಕ ಸಭೆಯಲ್ಲಿ ಅವರು ತಮ್ಮ ಪ್ರವಾಸ ಕಥನ ಕುರಿತು ಉಪನ್ಯಾಸ ನೀಡಿದರು.

ಹದಿನೈದು ದಿನಗಳ ಈ ಪ್ರವಾಸ ನಮ್ಮ ಜೀವನದ ಅವಿಸ್ಮರಣೀಯ ಘಟನೆಗಳಲ್ಲಿ ಒಂದು. ಫಂಡರಾಪುರದಿಂದ ಪ್ರಾರಂಭವಾದ ನಮ್ಮ ಯಾತ್ರೆಯು ಜ್ಯೋತಿರ್ಲಿಂಗಗಳ ದರ್ಶನ, ಕಾಶಿ ವಿಶ್ವೇಶ್ವರನ ದರ್ಶನ, ಆಗ್ರಾದ ತಾಜ್‌ಮಹಲ್, ರಾಷ್ಟ್ರದ ರಾಜಧಾನಿ ದೆಹಲಿ ಹೀಗೆ ಅನೇಕ ವೈವಿಧ್ಯಮಯ ಸ್ಥಳಗಳನ್ನು ಒಳಗೊಂಡಿತ್ತು. ನಾವು ಸೇವೆಯಲ್ಲಿದ್ದಾಗ ಕುಟುಂಬದವರೊಂದಿಗೆ ಪ್ರವಾಸ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ ಈಗ ಒಟ್ಟು 35 ಜನರು ಕುಟುಂಬ ಸಹಿತವಾಗಿ ಈ ಪ್ರವಾಸವನ್ನು ಮಾಡಿದ್ದು, ಒಂದು ರೋಚಕ ಅನುಭವವನ್ನೇ

ನಿವೃತ್ತ ಶಿಕ್ಷಕ ಎಂ.ಎಸ್. ದಢೇಸೂರಮಠ ಮಾತನಾಡಿ, ಪ್ರವಾಸದ ಅನುಭವಗಳು ಒಂದೆರಡಲ್ಲ. ಅದನ್ನು ಅನುಭವಿಸಿದವರಿಗೆ ಅದರ ಸವಿ ಏನೆಂಬುದು ಗೊತ್ತು. ನಮ್ಮ ಬೀಚಿ ಬಳಗದ ಮೂಲ ಉದ್ದೇಶದ ಪ್ರಕಾರ ಸದಸ್ಯರು ಪುಸ್ತಕವನ್ನೋದಿ ಅದರ ಬಗ್ಗೆ ಮಾತನಾಡುವ ಕಾರ್ಯ ಮತ್ತೆ ಮುಂದುವರೆಯಬೇಕೆಂದರು.

ನೀಡಿತು. ಇದರಿಂದ ಬಹಳಷ್ಟು ಜ್ಞಾನ ಸಂಪಾದನೆಗೂ ಅನುಕೂಲವಾಯಿತೆಂದು ಅರವಟಗಿಮಠ ಹೇಳಿದರು.

ಸಭೆಯನ್ನುದ್ದೇಶಿಸಿ ಡಾ. ಆರ್. ಕೆ. ಗಚ್ಚಿನಮಠ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕೆ.ಎಸ್. ಕಳಕಣ್ಣವರ ಮಾತನಾಡಿ, ಮುಂದಿನ ಸಭೆಯೊಳಗೆ ದಶಮಾನೋತ್ಸವದ ಸ್ಮರಣ ಸಂಚಿಕೆಗಳನ್ನು ಸದಸ್ಯರೆಲ್ಲರಿಗೂ ತಲುಪಿಸುವ ಕಾರ್ಯವನ್ನು ಮಾಡುತ್ತೇವೆ ಎಂದರು. ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಶಿಕ್ಷಕ ವಿ.ಎ. ಕುಂಬಾರ ಅಭಿನಂದಿಸಲಾಯಿತು.

ಅಗಲಿದ ಸಾಹಿತಿ ಗುರುಲಿಂಗ ಕಾಪಸೆಯವರಿಗೆ ಬೀಚಿ ಬಳಗದ ವತಿಯಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕೋಶಾಧ್ಯಕ್ಷ ಶಿವಯೋಗಿ ಜಕ್ಕಲಿ ನಿರೂಪಿಸಿದರು. ನಿರ್ಮಲಾ ಹಿರೇಮಠ ಸ್ವಾಗತಿಸಿದರು. ಸಭೆಯಲ್ಲಿ ನಿವೃತ್ತ ಸೈನಿಕ ಶಿವಪುತ್ರಪ್ಪ ಸಂಗನಾಳ, ಶಿಕ್ಷಕ ವಿ.ಎ. ಕುಂಬಾರ, ಎಂ.ಕೆ. ಬೇವಿನಕಟ್ಟಿ, ಸಿ.ಕೆ. ಕೇಸರಿ, ಜೆ.ಎ. ಪಾಟೀಲ ಮುಂತಾದವರಿದ್ದರು. ಶಿಕ್ಷಕ ಬಿ.ಟಿ. ತಾಳಿ ಪ್ರಾರ್ಥಿಸಿದರು.

ಕೆ.ಎಚ್. ಪಾಟೀಲ ಕರಿಯರ್ ಅಕಾಡೆಮಿ ಇಂದಿನಿಂದ ಕಾರ್ಯಾರಂಭ

ಸ್ಪರ್ಧಾತ್ಮಕ ಪ್ರಪಂಚಕ್ಕೆ ಯುವಪಡೆಗೆ ಬಲ

ನಾಡು ಮೆಚ್ಚಿದ ಜನನಾಯಕ ಕೆ.ಎಚ್. ಪಾಟೀಲರ ಜನ್ಮ ಶತಮಾನೋತ್ಸವ ವರ್ಷಾಚರಣೆಯಲ್ಲಿ ವಾರಕ್ಕೊಂದು ರಚನಾತ್ಮಕ ಕೆಲಸದ ನಿಮಿತ್ತ ಮಾರ್ಚ್ 31ರಂದು ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಬೆಟಗೇರಿ ಶಾಲಾ ಸಂಕೀರ್ಣದ ಪ್ರಾಂಗಣದಲ್ಲಿ 'ಕೆ.ಎಚ್. ಪಾಟೀಲ ಕರಿಯರ್ ಅಕಾಡೆಮಿ' ಕಾರ್ಯಾರಂಭ ಮಾಡಲಿದೆ. ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಮ್ಮ ಯುವಕ-ಯುವತಿಯರಿಗೆ ತರಬೇತಿ ನೀಡಿ ಅವರು ಧೈರ್ಯದಿಂದ, ಆತ್ಮವಿಶ್ವಾಸದಿಂದ ಮುನ್ನಡೆ ಸಾಧಿಸಲು ಈ ಸಂಸ್ಥೆ ಕೆಲಸ ಮಾಡಲಿದೆ.

ಯು.ಪಿ.ಎಸ್.ಸಿ (ಐಎಎಸ್/ಐಪಿಎಸ್) ಸೇರಿ ಎಲ್ಲ ಸರಕಾರಿ ಸೇವೆಗಳ ಆಯ್ಕೆಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ತಯಾರು ಮಾಡಲಿದೆ. ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಯಾಗಿರುವ ಈ ಕರಿಯರ್ ಅಕಾಡೆಮಿ ಸದ್ಯಕ್ಕೆ ಪೊಲೀಸ್ ಹಾಗೂ ಮಿಲಿಟರಿ ಆಯ್ಕೆಗೆ ತರಬೇತಿ-ಮಾರ್ಗದರ್ಶನ ಮಾಡಲಿದೆ. ಇಲ್ಲಿ ತರಬೇತಿ ನೀಡುವವರು ಪರಿಣಿತರು ಹಾಗೂ ಅನುಭವಶಾಲಿಗಳಾಗಿದ್ದಾರಲ್ಲದೆ ಈ ಕ್ಷೇತ್ರದಲ್ಲಿ ಸೇವೆಗೈದವರಾಗಿದ್ದಾರೆ.



ಇಂದು ಯಾವುದೇ ಕ್ಷೇತ್ರದ ಆಯ್ಕೆ ಇರಲಿ, ಅನುಭವ, ತರಬೇತಿ, ತಿಳುವಳಿಕೆ ಉಳ್ಳವರಾಗಿರುವುದು ಕಾಲದ ಅವಶ್ಯಕತೆಯಾಗಿದೆ. ಭಿನ್ನ ಭಿನ್ನ ಹುದ್ದೆಗಳಿಗೆ ಭಿನ್ನ ಭಿನ್ನ ಆಯ್ಕೆ ವಿಧಾನಗಗಳಿರುತ್ತವೆ. ಅದಕ್ಕಾಗಿ ಪ್ರತ್ಯೇಕ ತರಬೇತಿಯ ಅವಶ್ಯಕತೆ ಇರುವುದು. ಅಕಾಡೆಮಿ ಎಸ್.ಡಿ.ಸಿ., ಎಫ್.ಡಿ.ಸಿ. ಬ್ಯಾಂಕಿಂಗ್ ಸ್ಪರ್ಧಾ ಪರೀಕ್ಷೆ ಸೇರಿ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಆಯ್ಕೆಗೆ ತರಬೇತಿ ನೀಡಲಿದೆ.

ಎಲ್ಲ ಹಂತಗಳಲ್ಲಿ ಎಲ್ಲ ಶ್ರೇಣಿಗಳಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಲ್ಲಿ ಮಾರ್ಗದರ್ಶನ ತರಬೇತಿ ನೀಡುವುದಲ್ಲದೇ, ಪ್ರಾಯೋಗಿಕ ಪರೀಕ್ಷೆಗಳನ್ನು ಸಹ ನಡೆಸಲಾಗುವುದು. ಅಕಾಡೆಮಿಯಲ್ಲಿ ತರಬೇತಿಗೊಳಗಾಗಿರುವವರಿಗೆ ವಿಶಾಲವಾದ ಆಟದ ಮೈದಾನ, ಸುಸಜ್ಜಿತ ವರ್ಗದ ಕೋಣೆಗಳು, ಹಾಸ್ಟೆಲ್ ಸೌಲಭ್ಯ, ಅನುಭವಶಾಲಿ ತರಬೇತಿದಾರರು, ಕಂಪ್ಯೂಟರ್ ಆಧಾರಿತ ತರಬೇತಿ, ವಾಚನಾಲಯಗಳ ಸೌಲಭ್ಯ ಕಲ್ಪಿಸಲಾಗಿದೆ.

ಈ ಸೌಲಭ್ಯಗಳಿಂದ ಸಜ್ಜಾಗಿರುವ ಅಕಾಡೆಮಿಯಲ್ಲಿ ತರಬೇತಿಗೊಳಗಾದ ಅಭ್ಯರ್ಥಿಗಳು ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಸ್ಪರ್ಧಾತ್ಮಕ ಆಯ್ಕೆ ಪ್ರಕ್ರಿಯೆ ಎದುರಿಸಿ ಯಶಸ್ವಿಯಾಗಲೆಂದು ಹಾರೈಸಲಾಗಿದೆ. ದಿ ಗದಗ ಕೋ ಆಪ್ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಪ್ರಾರಂಭಗೊಂಡಿರುವ ಜಿ-ಎನ್.ಟಿ.ಟಿ.ಎಫ್. ದೇಶದಲ್ಲಿಯೇ ಪ್ರಖ್ಯಾತವಾಗಿರುವ ತಾಂತ್ರಿಕ ಶಿಕ್ಷಣ ತರಬೇತಿ ನೀಡುವ ಕೆಲಸವನ್ನು ಶೀಘ್ರದಲ್ಲಿ ಆರಂಭಿಸಲಿದೆ. ಇದರಿಂದಾಗಿ ಈ ಭಾಗದ ಉದ್ಯೋಗಾಕಾಂಕ್ಷಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಲ್ಲದೇ, ಸ್ವಯಂ ಉದ್ಯಮ ಪ್ರಾರಂಭಿಸಲು ಹಾಗೂ ಇತರರಿಗೆ ಉದ್ಯೋಗ ಸೃಜಿಸಲು ಅನುಕೂಲವಾಗಲಿದೆ.

– ಜೆ.ಕೆ. ಜಮಾದಾರ.

ಡಾ. ಬಿ.ಜಿ. ತಳ್ಳಳ್ಳಿ ಗುರುಗಳ ಸೇವಾ ನಿವೃತ್ತಿಯ ನಿಮಿತ್ತ ಲೇಖನ

ವಿದ್ಯಾರ್ಥಿಗಳ ಮೆಚ್ಚಿನ ಪ್ರಾಧ್ಯಾಪಕ

ಗುರು ಬ್ರಹ್ಮ ಗುರು ವಿಷ್ಣು
ಗುರು ದೇವೊ ಮಹೇಶ್ವರಾ
ಗುರು ಸಾಕ್ಷಾತ್ ಪರ ಬ್ರಹ್ಮ
ತಸ್ಮೈ ಶ್ರೀ ಗುರುವೇ ನಮ:

ಡಾ. ಬಿ.ಜಿ. ತಳ್ಳಳ್ಳಿ ಗುರುಗಳು ಸದಾ ಕ್ರಿಯಾಶೀಲರು, ಸರಳ ಜೀವಿಗಳು, ಅಧ್ಯಯನ ಶೀಲರು, ನಡೆ- ನುಡಿ, ಆಚಾರ-ವಿಚಾರ, ಶಿಸ್ತು, ಸಮಯ ಪ್ರಜ್ಞೆ, ವಿದ್ಯಾರ್ಥಿಗಳ ಭವಿಷ್ಯದ ಬಗೆಗೆ ಅವರಿಗಿದ್ದ ಕಾಳಜಿ ಅಪಾರವಾದುದು.

ಗದುಗಿನ ಕನಕದಾಸ ಶಿಕ್ಷಣ ಸಮಿತಿಯ ಕೆಎಸ್‌ಎಸ್ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗದ ಉಪನ್ಯಾಸಕರು, ಪ್ರಾಧ್ಯಾಪಕರು, ವಿಭಾಗದ ಮುಖ್ಯಸ್ಥರಾಗಿ 35 ವರ್ಷಗಳ ಸುದೀರ್

ಕೋಲಾರ ಲೋಕಸಭಾ ಕ್ಷೇತ್ರವನ್ನು ಮಾದಿಗರಿಗೆ ನೀಡಿ

■ ವಿಜಯಸಾಕ್ಷಿ ಸುದ್ದಿ, ಕೋಲಾರ

ಕೋಲಾರ ಲೋಕಸಭಾ ಕ್ಷೇತ್ರವನ್ನು ಕಾಂಗ್ರೆಸ್ ಪಕ್ಷ ಮಾದಿಗರಿಗೆ ನೀಡಬೇಕು ಎಂದು ಗದಗ ಜಿಲ್ಲಾ ಮಾದಿಗ ದಂಡೋರ ಸಮಿತಿ ಅಧ್ಯಕ್ಷ ಪ್ರಕಾಶ ಹೊಸಳ್ಳಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾಂಗ್ರೆಸ್ ಪಕ್ಷ ಕೋಲಾರ ಲೋಕಸಭಾ ಕ್ಷೇತ್ರಕ್ಕೆ ಮಾದಿಗ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಮೂಲಕ ನ್ಯಾಯ ಒದಗಿಸಬೇಕು. ಅಲ್ಲದೆ ಮಾದಿಗ ಜನಾಂಗವು ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ಬೆಂಬಲಿಸಿದ್ದು, ಅತ್ಯಧಿಕ ಸ್ಥಾನಗಳನ್ನು ಗೆಲ್ಲಲು ಬಹು ಮುಖ್ಯ ಕಾರಣವಾಗಿದೆ. ಹೀಗಾಗಿ ಪಕ್ಷದ ಹೈಕಮಾಂಡ್ ಮಾದಿಗ ಜನಾಂಗದ ಅಭ್ಯರ್ಥಿಯನ್ನು ಕ್ಷೇತ್ರಕ್ಕೆ ನಿಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಚುನಾವಣಾ ಬಹಿಷ್ಕಾರದ ಎಚ್ಚರಿಕೆ

▶▶ ಮೊದಲನೇ ಪುಟದಿಂದ

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ ವಾಸುದೇವ ಎಂ.ಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ಮಹೇಶ ಹಡಪದ ಅವರು ನಿವಾಸಿಗಳ ಸಮಸ್ಯೆ ಆಲಿಸಿದ ಬಳಿಕ ಮತದಾನ ಪ್ರತಿಯೊಬ್ಬರ ಆದ್ಯ ಕರ್ತವ್ಯ. ಪವಿತ್ರವಾದ ಮತದಾನದಿಂದ ಹೊರಗುಳಿಯುವುದು ಮತ್ತು ಬಹಿಷ್ಕಾರ ಮಾಡುವುದು ಒಳ್ಳೆಯ ಬೆಳವಣಿಗೆಯಲ್ಲ. ನದಿಯಲ್ಲಿ ನೀರಿಲ್ಲದಿರುವುದು ಸಮಸ್ಯೆಗೆ ಕಾರಣವಾಗಿದೆ. ಉಂಟಾಗಿರುವ ತಾಂತ್ರಿಕ ತೊಂದರೆ ಸರಿಪಡಿಸಿ ಕೂಡಲೇ ಸಾರ್ವಜನಿಕ ನಲ್ಲಿ ನೀರು ಸರಬರಾಜು ಮಾಡಲಾಗುವುದು. ಮತದಾನ ಬಹಿಷ್ಕಾರದಂತಹ ನಿರ್ಧಾರ ಎಲ್ಲರೂ ಕೈಬಿಡಿ. ನಿಮ್ಮ ಸಮಸ್ಯೆ ಪರಿಹಾರಕ್ಕೆ ಸ್ಪಂದಿಸುತ್ತೇವೆ ಎಂದು ತಿಳಿ ಹೇಳಿ ಮನವೊಲಿಸಿದರು.

ಈ ವೇಳೆ ನಿವಾಸಿಗಳಾದ ಸಿದ್ದವ್ವ ಪೂಜಾರ, ದೇವಕ್ಕ ಗದ್ದಿ, ಹಾಲಮ್ಮ ಬಳ್ಳೊಳ್ಳಿ, ಶಾಂತವ್ವ ಕನವಳ್ಳಿ, ಶೇಖವ್ವ ಗದ್ದಿ, ದೇವಕ್ಕ ಗದ್ದಿ, ನೀಲಪ್ಪ ಗದ್ದಿ, ಮುದಕಪ್ಪ ಮಸೂತಿ, ಗುಡ್ಡಪ್ಪ ವಗ್ಗರ, ಬಸವರಾಜ ಕುಸಗಲ್, ಬಸಪ್ಪ ಕುರಹಟ್ಟಿ, ಬಸವರಾಜ ಕಡ್ಡಿಪೂಜಾರ, ಸಾವಿತ್ರಿ ಕುರಿ, ಸಾವಕ್ಕ ಮಳ್ಳಳ್ಳಿ ಪ್ರವೀಣ ಕೆರೂರ, ನಿಂಗಪ್ಪ ಕುರಟ್ಟಿ, ಆನಂದ ಗದ್ದಿ, ನೀಲಪ್ಪ ಬಾಲೆಹೊಸೂರ ಸೇರಿ ಹಲವರಿದ್ದರು.

ಸ್ವೀಪ್ ಸಮಿತಿ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಮತದಾನ ಜಾಗೃತಿ ಜಾಥಾ

ಮತದಾನ ನಮ್ಮೆಲ್ಲರ ಹಕ್ಕು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ಶನಿವಾರ ಜಿಲ್ಲಾ, ತಾಲೂಕ ಸ್ವೀಪ್ ಸಮಿತಿ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಇವರುಗಳ ಸಹಯೋಗದಲ್ಲಿ ಮತದಾನ ಜಾಗೃತಿ ಜಾಥಾ ನಡೆಸಲಾಯಿತು. 2024ರ ಲೋಕಸಭಾ ಚುನಾವಣೆ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಅಲ್ಲಲ್ಲಿ ಮತದಾನದ ಮಹತ್ವ ಕುರಿತು ಮಾಹಿತಿ ನೀಡುವ ಕಾರ್ಯವನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕೃಷಿ ಅಧಿಕಾರಿ ಚಂದ್ರಶೇಖರ ನರಸಮ್ಮನವರ, ಮತದಾನ ಎನ್ನುವದು ಪವಿತ್ರ ಕಾರ್ಯವಾಗಿದ್ದು ಮತದಾನದಿಂದ ಯಾರೂ ದೂರ ಉಳಿಯದೇ ಮುಂಬರುವ ಲೋಕಸಭೆ ಚುನಾವಣೆ ಮತದಾನ ಶೇ.100ರಷ್ಟಾಗಬೇಕು. ಮತದಾನ ನಮ್ಮೆಲ್ಲರ ಹಕ್ಕು, ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ಅದರಲ್ಲೂ ರೈತರು ಮತದಾನದಿಂದ ವಂಚಿತರಾಗಬಾರದು ಎಂದರು.

ಗ್ರೇಡ್-2 ತಹಸೀಲ್ದಾರ ಮಂಜುನಾಥ ಅಮಾಸಿ, ಮತದಾನ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದ್ದು, ಪವಿತ್ರವಾದ ಮತದಾನದಿಂದ ಸುಭದ್ರ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮತದಾನ ಮಾಡುವ ಜತೆಗೆ ತಾವು ವಾಸಿಸುವ ಪ್ರದೇಶ, ಗ್ರಾಮ, ವೃತ್ತಿ ಕ್ಷೇತ್ರಗಳಲ್ಲಿ ಕಡ್ಡಾಯವಾಗಿ ಮತದಾನ ಮಾಡುವಂತೆ ಪ್ರೇರೇಪಿಸಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಏ.9ರವರೆಗೆ ಅವಕಾಶ ಕಲ್ಪಿಸಿದ್ದು, 18 ವರ್ಷ ತುಂಬಿದ ಯುವಜನತೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

> ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ರೈತ ಮತದಾರರಿಗೆ ಕಡ್ಡಾಯ ಮತದಾನದ ಹಕ್ಕಿನ ಕುರಿತು, ಮತದಾನ ಮಹತ್ವ ಕುರಿತು ವಿವರಿಸಿದ ಚಂದ್ರಶೇಖರ ನರಸಮ್ಮನವರ, ಇದೊಂದು ಪ್ರಜಾಪ್ರಭುತ್ವದ ಹಬ್ಬವಾಗಿದ್ದರಿಂದ ರೈತರು ಮತದಾನದ ಹಕ್ಕಿನಿಂದ ದೂರ ಉಳಿಯಬಾರದು. ಪ್ರತಿಯೊಬ್ಬ ರೈತರೂ ಮತದಾನ ಮಾಡಬೇಕು ಎಂದು ಮನವಿ ಮಾಡಿದರು.

ಮತದಾನ ಜಾಗೃತಿ ಜಾಥಾ ತಾಲೂಕು ಪಂಚಾಯಿತಿ ಕಚೇರಿಯಿಂದ ಪ್ರಾರಂಭಗೊಂಡು ಬಜಾರ ರಸ್ತೆ ಮುಖಾಂತರ ತಹಸೀಲ್ದಾರ ಕಚೇರಿ ತಲುಪಿ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ಕೃಷಿ ಅಧಿಕಾರಿ ಕುಸುಮಾದೇವಿ ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ ಶಿವಾನಂದ ಬಾನಿ, ಆತ್ಮ ಸಿಬ್ಬಂದಿ ದೇವರಾಜ ಆಚಲ್ಕರ್, ಅಮಿತ್ ಹಾಲೇವಾಡಿಮಠ, ಸಂಜೀವಿನಿ ಟೆಕ್ನಿಷಿಯನ್ ಹರೀಶ್ ಭದ್ರಾಪೂರ, ಮಹೇಶ ನಂದೆಣ್ಣವರ, ಸಿದ್ದು ಕನವಳ್ಳಿ, ಭಾರತಿಯ ಕಿಸಾನ ಸಂಘದ ತಾಲೂಕ ಅಧ್ಯಕ್ಷ ಟಾಕಪ್ಪ ಸಾತಪುತೆ, ತಾಲೂಕಿನ ಪ್ರತಿ ಗ್ರಾಪಂ ಕೃಷಿ ಸಖಿಯರು, ಹಾಗೂ ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಸಿಬ್ಬಂದಿಗಳು ಇದ್ದರು.

ಮದುವೆ, ಇತರೆ ಸಮಾರಂಭಗಳ ದಿನಾಂಕಗಳ ಮಾಹಿತಿ ಸಲ್ಲಿಸಿ: ಚುನಾವಣಾಧಿಕಾರಿ ದಿವ್ಯ ಪ್ರಭು

ಕಾರ್ಯಕ್ರಮದ ಮಾಹಿತಿ ಕಡ್ಡಾಯವಾಗಿ ಸಲ್ಲಿಸಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಕಲ್ಯಾಣ ಮಂಟಪಗಳು ಹಾಗೂ ಸಮುದಾಯ ಭವನಗಳು ತಮ್ಮಲ್ಲಿ ನಿಗದಿಯಾಗಿರುವ ಮದುವೆ ಸಮಾರಂಭಗಳ, ಹುಟ್ಟುಹಬ್ಬ ಹಾಗೂ ಇನ್ನಿತರೆ ಸಮಾರಂಭಗಳ ಕಾರ್ಯಕ್ರಮಗಳ ದಿನಾಂಕಗಳನ್ನು ಕಡ್ಡಾಯವಾಗಿ ಆಯಾ ತಾಲೂಕು ತಹಸೀಲ್ದಾರರಿಗೆ ತಪ್ಪದೇ ಮಾಹಿತಿ ಸಲ್ಲಿಸತಕ್ಕದ್ದು ಎಂದು ಜಿಲ್ಲಾ ಚುನಾವಣಾಧಿಕಾರಿಗಳಾದ ದಿವ್ಯ ಪ್ರಭು ಅವರು ಹೇಳಿದರು.

ಚುನಾವಣಾ ಕರ್ತವ್ಯ ಮೇಲಿರುವ ಎಸ್.ಎಸ್.ಟಿ, ಎಫ್.ಎಸ್.ಟಿ ಹಾಗೂ ವಿ.ಎಸ್.ಟಿ ತಂಡಗಳು ನಿಗಾ ವಹಿಸುತ್ತವೆ. ಮಾಲೀಕರು ತಮ್ಮ ಸಭಾಭವನದಲ್ಲಿ ಯಾವುದಾದರೂ ರಾಜಕೀಯ ಚಟುವಟಿಕೆಗಳು ಜರುಗಿದಲ್ಲಿ ಅಂತವರ ವಿರುದ್ಧ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಡಿ ಕ್ರಮ ಕೈಗೊಳ್ಳಲಾಗುವುದೆಂದು ಅವರು ತಿಳಿಸಿದರು.

ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳು ರಾಜಕೀಯ ಚುನಾವಣಾ ಪ್ರಚಾರಕ್ಕೆ ದುರುಪಯೋಗವಾಗಬಾರದು. ಚುನಾವಣಾ ಪ್ರಚಾರಕ್ಕೆ ಪಕ್ಷಗಳು ಅನುಮತಿ ಪಡೆದಿದ್ದಲ್ಲಿ ಅಭ್ಯಂತರವಿಲ್ಲ. ಧಾರ್ಮಿಕ ಕಟ್ಟಡಗಳಲ್ಲಿ, ಕಲ್ಯಾಣ ಮಂಟಪ ಇದ್ದಲ್ಲಿ ತೀವ್ರ ನಿಗಾ ವಹಿಸಲಾಗುವುದೆಂದು ಅವರು ತಿಳಿಸಿದರು.

ಕಲ್ಯಾಣ ಮಂಟಪದ ಮಾಲೀಕರು ಮದುವೆ ಹಾಗೂ ಇನ್ನಿತರ ಸಮಾರಂಭಗಳ ದಿನಾಂಕಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳ ಇ-ಮೇಲ್ deo.dharwad@gmail.com ಗೆ ಸಹ ಸಲ್ಲಿಸಬಹುದಾಗಿದೆ.

> ಯಾವುದೇ ವ್ಯಕ್ತಿಯು ಕರಪತ್ರ, ಫಲಕಗಳು, ಬ್ಯಾನರ್ಸ್, ಬಂಟಿಂಗ್ಸ್, ಫ್ಲೆಕ್ಸ್ ಅಥವಾ ಭಿತ್ತಿಪತ್ರಗಳನ್ನು ಮುದ್ರಿಸುವ ಪೂರ್ವದಲ್ಲಿ ಅವರಿಂದ ಸಹಿ ಮಾಡಲ್ಪಟ್ಟ ಮತ್ತು ಅವರ ವೈಯಕ್ತಿಕವಾಗಿ ತಿಳಿದಿರುವ ಇಬ್ಬರು ವ್ಯಕ್ತಿಗಳಿಂದ ಧೃಡೀಕರಿಸಲ್ಪಟ್ಟ ಪ್ರಕಾಶಕರ ಗುರತಿನ ಘೋಷಣೆಯನ್ನು ದ್ವಿಪ್ರತಿಯಲ್ಲಿ ಮುದ್ರಣಕ್ಕೆ ಸಲ್ಲಿಸದ ಹೊರತು ಮತ್ತು ಡಾಕ್ಯುಮೆಂಟ್‌ನ ಮುದ್ರಣದ ನಂತರ ಮೂರು ದಿನಗಳೊಳಗಾಗಿ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ಪ್ರಕಾಶಕರು ಅಥವಾ ಮುದ್ರಕರು ಚುನಾವಣೆಗೆ ಸಂಬಂಧಪಟ್ಟ ಕರಪತ್ರ ಅಥವಾ ಕೈ-ಬಿಲ್, ಫಲಕಗಳು, ಬ್ಯಾನರ್ಸ್, ಬಂಟಿಂಗ್ಸ್, ಫ್ಲೆಕ್ಸ್ ಅಥವಾ ಭಿತ್ತಿಪತ್ರಗಳು, ಹೆಸರು ವಿಳಾಸ, ದಿನಾಂಕ ಮತ್ತು ಪ್ರತಿಗಳ ಸಂಖ್ಯೆ ಇಲ್ಲದೆ ಮುದ್ರಿಸುವಂತಿಲ್ಲ ಮತ್ತು ಪ್ರಕಟಿಸುವಂತಿಲ್ಲ.

ಅಂತಹ ಯಾವುದೇ ಮುದ್ರಣ ಅಥವಾ ಪ್ರಕಟಣೆಯನ್ನು ಮುದ್ರಣಾಲಯ ಅಥವಾ ಪ್ರಕಾಶಕರು ಮುದ್ರಿತ ವಸ್ತುಗಳ ನಾಲ್ಕು ಪ್ರತಿಗಳನ್ನು ಮತ್ತು ಪ್ರಕಾಶಕರ ಘೋಷಣೆಯ ಒಂದು ಪ್ರತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಿರುವ ನಮೂನೆಯಲ್ಲಿ ಅದರ ಮುದ್ರಣದ ಮೂರು ದಿನಗಳೊಳಗೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕು. ತಪ್ಪಿದಲ್ಲಿ ಪ್ರಜಾಪ್ರತಿನಿಧಿ ಕಾಯಿದೆ 1951ರ 127-ಂನ ಉಲ್ಲಂಘನೆ ಮತ್ತು ಶಿಕ್ಷಾರ್ಹ ಅಪರಾಧವಾಗಿದೆ ಎಂದರು.

ವೇದಿಕೆಯಲ್ಲಿ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಮೋನಾ ರಾವುತ್, ಮಹಾನಗರ ಪಾಲಿಕೆಯ ಆಯುಕ್ತ ಡಾ. ಈಶ್ವರ ಉಳಾಗಡ್ಡಿ, ಜಿಲ್ಲೆಯ ಎಲ್ಲ ಕಲ್ಯಾಣಮಂಟಪದ ಮಾಲೀಕರು ಹಾಗೂ ಪ್ರಿಂಟಿಂಗ್ ಪ್ರೆಸ್ ಮಾಲೀಕರು ಸಭೆಯಲ್ಲಿ ಉಪಸ್ಥಿತರಿದ್ದರು.

ಮಾತು ಆರಂಭಿಸಿದ 'ಸಿಂಹರೂಪಿಣಿ'

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಶ್ರೀ ಚಕ್ರ ಫಿಲಂಸ್ ಲಾಂಛನದಲ್ಲಿ ಭಕ್ತಿ ಪ್ರಧಾನ ಚಲನಚಿತ್ರ 'ಸಿಂಹರೂಪಿಣಿ' ಅದ್ದೂರಿ ಗ್ರಾಫಿಕ್ಸ್‌ನೊಂದಿಗೆ ತೆರೆಗೆ ಬರಲು ಸದ್ದಿಲ್ಲದೆ ಸಿದ್ಧವಾಗುತ್ತಿದೆ. ಈಗಾಗಲೇ ಸಂಪೂರ್ಣ ಚಿತ್ರೀಕರಣ ಮುಗಿಸಿರುವ ಚಿತ್ರ ತಂಡ, ಈಗ ಮಾತಿನ ಮರುಲೇಪನ ಕಾರ್ಯವನ್ನು ಲೂಪ್ ಸ್ಟುಡಿಯೋದಲ್ಲಿ ಆರಂಭಿಸಿದೆ.

ಕೆಜಿಎಫ್, ಸಲಾರ್ ಚಿತ್ರಗಳ ಖ್ಯಾತ ಸಾಹಿತಿ ಕಿನ್ನಾಳ ರಾಜ್ ಅವರು ನಿರ್ದೇಶನ ಮಾಡುತ್ತಿದ್ದು, ಕೆ.ಎಂ ನಂಜುಂಡೇಶ್ವರ ಕಥೆ ಬರೆದು ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಬರುವ ತಿಂಗಳು ಚಿತ್ರದ ಮೊದಲ ನೋಟ (ಫಸ್ಟ್ ಲುಕ್) ಬಿಡುಗಡೆಗೆ ಆಗಲಿದ್ದು, ಇದು ಶ್ರೀ ಮಾರಮ್ಮ ದೇವಿಯ ಕುರಿತಾದ ಚಿತ್ರವಾಗಿದೆ.

ಚಿತ್ರದಲ್ಲಿ ಮಾರಮ್ಮ ದೇವಿಯಾಗಿ ನಟಿ ಯಶಸ್ವಿನಿ ಕಾಣಿಸಿಕೊಂಡಿದ್ದಾರೆ. ಖ್ಯಾತ ನಿರೂಪಕಿ ಅಂಕಿತಾ ಗೌಡ ನಾಯಕಿಯಾಗಿ ನಟಿಸಿದ್ದಾರೆ. ಇನ್ನುಳಿದಂತೆ ಯಶ್ ಶೆಟ್ಟಿ, ಪುನೀತ್ ರುದ್ರನಾಗ್, ದಿವ್ಯಾ ಆಲೂರು, ತೆಲುಗಿನ ಹಿರಿಯ ನಟರಾದ ಸುಮನ್, ತಮಿಳು ನಟ ದಿನಾ, ಹರೀಶ್ ರಾಯ್, ನೀನಾಸಂ ಅಶ್ವಥ್, ತಬಲಾ ನಾಣಿ, ದಿನೇಶ್ ಮಂಗಳೂರು, ಭಜರಂಗಿ ಪ್ರಸನ್ನ ಅವರಂತಹ ಕಲಾವಿದರ ಜೊತೆ ಸಾಗರ್, ವಿಜಯ್ ಚಂಡೂರ್, ವರ್ಧನ್ ತೀರ್ಥಹಳ್ಳಿ, ಮನಮೋಹನ ರೈ, ನವಾಜ್, ಲೋಹಿತ್, ಪಿಳ್ಳಪ್ಪ, ಉಮೇಶಣ್ಣ, ವಿಜಯ್ ಬಸ್ರೂರು, ಸುನಂದಾ ಕಲ್ಬುರ್ಗಿ, ವೇದಾ ಹಾಸನ್, ರಾಧಾ ರಾಮಚಂದ್ರ, ಗುರುಮೂರ್ತಿ, ವೈಭವ್ ನಾಗರಾಜ, ಶಶಿಕುಮಾರ, ಯುವರಾಜ್ ಮುಂತಾದ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ.

ಸಂಗೀತ ಆಕಾಶ ಪರ್ವ, ಛಾಯಾಗ್ರಹಣ ಕಿರಣ್ ಕುಮಾರ್, ಸಂಕಲನ ವೆಂಕಿ ಯುಡಿವಿ, ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆಗಿ ಬಾಲಸುಬ್ರಹ್ಮಣ್ಯಂ ಅವರು ಕಾರ್ಯ ನಿರ್ವಹಿಸಿದ್ದಾರೆ. ಪತ್ರಿಕಾ ಸಂಪರ್ಕ ಆರ್ ಚಂದ್ರಶೇಖರ್. ಮತ್ತು ಡಾ. ಪ್ರಭು ಗಂಜಿಹಾಳ್, ಡಾ. ವೀರೇಶ್ ಹಂಡಿಗಿ ಅವರದ್ದಾಗಿದೆ. ರಾಜಶೇಖರ್, ಮಲ್ಲಿಕ್, ನಿತ್ಯ ದಿನೇಶ್, ತೇಜಸ್ ನಿರ್ದೇಶನ ತಂಡದಲ್ಲಿದ್ದಾರೆ.

ಕಲಾ ಮಹರ್ಷಿ ಟಿ.ಪಿ. ಅಕ್ಕಿ ಪುಣ್ಯ ಸ್ಮರಣೆ ನಿಮಿತ್ತ ಕವನ

ಕಲೆಯಲ್ಲಿ ಕೈಲಾಸ ಕಂಡ

ಬೆಳವಲ ನಾಡಿನ ಬಯಲು ಸೀಮೆಯಲ್ಲಿ
ಬಣ್ಣದ ಬಂಗಾರ ಬಿತ್ತಾರ
ಬಣ್ಣದ ಬಂಗಾರ ಬಿತ್ತಿ ಬೆಳೆದಾರ
ಟಿ.ಪಿ. ಅಕ್ಕಿ ಗುರವರ

ಬೇಡವೆಂದವರೆಷ್ಟೋ
ಬಿಡು ಎಂದವರೆಷ್ಟೋ
ಮಾಡು ಎಂದವರೆಷ್ಟೋ
ಬೆನ್ನು ಬಿದ್ದವರೆಷ್ಟೊ
ಭಯದ ನಂಜು ಬಿಟ್ಟು
ಹೃದಯದ ಕದ ತೆರೆದು
ಮಾತೆಯ ಮಮತೆ ತೋರ್ಯಾರ
ಮಾತೆಯ ಮಮತೆ ತೋರುತ್ತ ಗುರುವರ್ಯ
ಕಲೆಯಲ್ಲೇ ಕೈಲಾಸ ಕಂಡಾರ

ನೂರಾರು ನೋವ ಮೆಟ್ಟಿ
ವಿಜಯ ಮಂದಿರಕಟ್ಟಿ
ಶಿಷ್ಯರಿಗೆ ಬುತ್ತಿಕಟ್ಟಿ
ತುಂಬ್ಯಾನ ನೆತ್ತಿ ಹೊಟ್ಟಿ
ಕಾಡು ಕಲ್ಲು ಕೆತ್ತಿಕೆತ್ತಿ
ಮಾಡ್ಯಾರ ಮಂದಿರ ಮೂರ್ತಿ
ಮಾಡ್ಯಾರ ಸುಂದರ ಮೂರ್ತಿ
ಜಗಕೆಲ್ಲಾ ಇವರೇ ಸ್ಫೂರ್ತಿ

ಮಾತಿನ ನುಡಿ ಚಂದ
ಪ್ರೀತಿಯ ನಡೆಚಂದ
ಸ್ನೇಹ ಸಂಪ್ರೀತಿ ಸಿರಿಗಂಧ ಸೂಸಿ
ಮನ ಮನಕೆ ನೀಡಿದ ಆನಂದ
ಕಲಾವಿದರ ಬಾಳಿಗೆ ಬೆಲೆತಂದ
ಕಲಾವಿದರ ಬಾಳಿಗೆ ನೆಲೆ ತಂದ ಗುರುವರ್ಯ
ಇತಿಹಾಸ ಪುಟದಲ್ಲಿ ಹಸಿರಾದ ಹೆಸರಾದರು
ಕಲೆಯ ಕುಲಕೋಟಿಯ ಬಾಳಿಗೆ ಬೆಳಕಾದರು

– ಬಸವರಾಜ ನೆಲಜೇರಿ.

ಪರಸ್ಪರ ಬಣ್ಣ ಹಚ್ಚುವ ಮೂಲಕ ರಂಗಿನಾಟಕ್ಕೆ ಹೆಚ್ಚಿದ ರಂಗು | ಡಿಜೆ ಅಬ್ಬರ, ರೇನ್ ಡ್ಯಾನ್ಸ್ ತಂಪು

ಹಬ್ಬದ ಆಚರಣೆ ದಾರಿ ತಪ್ಪದಿರಲಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮನಸ್ಸಿನ ಅರಿಷಡ್ವರ್ಗಗಳ ಕಳೆದು, ಪರಸ್ಪರ ಪ್ರೀತಿ-ಸ್ನೇಹ, ಬಾಂಧವ್ಯ-ಸೌಹಾರ್ಧತೆ ಬೆಸೆಯುವ ರಂಗಿನೋಕುಳಿ ಹಬ್ಬ ಶುಕ್ರವಾರ ಲಕ್ಷ್ಮೇಶ್ವರದಲ್ಲಿ ಸಡಗರ ಸಂಭ್ರಮದಿಂದ ನಡೆಯಿತು. ಬೆಳ್ಳಂ ಬೆಳಿಗ್ಗೆಯೇ ಪುಟ್ಟ ಮಕ್ಕಳು ಹೆಣ್ಣು-ಗಂಡು ಬೇಧ-ಬಾವವಿಲ್ಲದೇ ಬಣ್ಣದ ನೀರು ತುಂಬಿದ್ದ ಪಿಚಕಾರಿ ಮತ್ತು ಪ್ಲಾಸ್ಟಿಕ್ ಬಾಟಲಿಗಳನ್ನು ಹಿಡಿದು ಪರಸ್ಪರ ಬಣ್ಣ ಹಚ್ಚುವ ಮೂಲಕ ಎಲ್ಲೆಲ್ಲೂ ರಂಗಿನಾಟಕ್ಕೆ ರಂಗು ಮೂಡಿಸಿದರು.

ಪಟ್ಟಣದ ಹಳ್ಳದ ಕೇರಿ ಓಣಿಯ ಯುವಕ ಸಂಘದವರು ಟ್ರ್ಯಾಕ್ಟರಿನಲ್ಲಿ ರಾಮಮಂದಿರ ಆಕೃತಿಯಲ್ಲಿ ರತಿ-ಕಾಮಣ್ಣನ ಮೂರ್ತಿಯನ್ನಿರಿಸಿ ಡಿಜೆ ಅಬ್ಬರದ ಕುಣಿತದೊಂದಿಗೆ ಮೆರವಣಿಗೆ ಮಾಡಿದರು. ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಡಾ.ಚಂದ್ರು ಲಮಾಣಿ, ಹೋಳಿ ಹಬ್ಬ ಭಾರತದ ಸಂಸ್ಕೃತಿಯ ಪ್ರತೀಕ. ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಗುವಂತೆ ವಿವಿಧ ಜಾತಿ, ಧರ್ಮ, ಬಡವ-ಬಲ್ಲಿದ, ಮೇಲು-ಕೀಳು, ಹಿರಿ-ಕಿರಿಯರನ್ನು ಸೇರಿಸಿ ಪರಸ್ಪರರಲ್ಲಿ ಸ್ನೇಹ, ಪ್ರೀತಿ, ವಿಶ್ವಾಸ, ಬಾಂಧವ್ಯ, ಸೌಹಾರ್ದತೆ ಬೆಸೆಯುವ ಶಕ್ತಿ ಹೋಳಿ ಹಬ್ಬಕ್ಕಿದೆ. ಈ ಹಬ್ಬ ಕೆಟ್ಟದ್ದರ ಮೇಲೆ ಒಳ್ಳೆಯದರ ವಿಜಯದ ಸಂಕೇತವಾಗಿದೆ.

ಪ್ರಸ್ತುತ ಡಿಜೆ ಅಬ್ಬರ, ಸಂಸ್ಕಾರ ರಹಿತ ವರ್ತನೆ, ಸರಾಯಿ ಕುಡಿತದಿಂದ ಹಬ್ಬದ ಆಚರಣೆ ದಾರಿ ತಪ್ಪದಿರಲಿ ಎಂದು ಮನವಿ ಮಾಡಿದರು. ಈ ವೇಳೆ ಬಿಜೆಪಿ ಮಂಡಲ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ, ಯಲ್ಲಪ್ಪಗೌಡ ಉದ್ದನಗೌಡ್ರ, ಎಂ.ಆರ್. ಪಾಟೀಲ, ನಿಂಗ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಪತಂಜಲಿ ಯೋಗ ಸಮಿತಿ ಹಾಗೂ ಮಹಿಳಾ ಪತಂಜಲಿ ಯೋಗ ಸಮಿತಿಯಿಂದ ನಗರದ ಮುನಸಿಪಲ್ ಮೈದಾನದಲ್ಲಿ ವಿಶೇಷವಾಗಿ ರಂಗ ಪಂಚಮಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪುಷ್ಪವೃಷ್ಟಿ ನೋಡಿವವರ ಮನ ಸೂರೆಗೊಳ್ಳುವಂತಿತ್ತು. ನಗರದ ಎಲ್ಲ ಕಕ್ಷೆಯಿಂದ ಎಲ್ಲ ಯೋಗ ಸಾಧಕರು ಉತ್ಸಾಹದಿಂದ ಭಾಗವಹಿಸಿದ್ದರು.

ರೇಣುಕಾಚಾರ್ಯ ಜಯಂತಿ ಇಂದು

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಜಂಗಮಾಭಿವೃದ್ಧಿ ಸಂಘದ ವತಿಯಿಂದ ಮಾ.31ರಂದು ಸಾಯಂಕಾಲ 6 ಗಂಟೆಗೆ ಬಾಲಲೀಲಾ ಮಾಹಾಂತ ಶಿವಯೋಗಿಗಳ ಗವಿಮಠದ ಆವರಣದಲ್ಲಿ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಗದಗ-ಅಡ್ನೂರ-ರಾಜೂರು ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಸಮ್ಮುಖವನ್ನು ಗದಗ ಅಡವೀಂದ್ರಮಠದ ಮಹೇಶ್ವರ ಸ್ವಾಮೀಜಿ, ಅಧ್ಯಕ್ಷತೆಯನ್ನು ಬಸಯ್ಯ ಅಣ್ಣಿಗೇರಿಮಠ, ಉದ್ಘಾಟಕರಾಗಿ ಬಸಯ್ಯ ದಂಡಾವತಿಮಠ, ಉಪನ್ಯಾಸಕರಾಗಿ ಆನಂದಯ್ಯ ವಿರಕ್ತಮಠ, ಮುಖ್ಯ ಅತಿಥಿಗಳಾಗಿ ಎಂ.ಡಿ. ಬಟ್ಟೂರ, ಎಸ್.ಎಂ. ನೀಲಗುಂದ, ಡಾ. ಎಸ್.ಸಿ. ಚವಡಿ, ರಾಮಣ್ಣಾ ಕಮಾಜಿ, ಅಶೋಕ ಸೊನಗೋಜಿ, ಬಸವರಾಜ ಬಡ್ನಿ, ಗಂಗಪ್ಪ ಸುಂಕಾಪೂರ, ಸಂಜಯ ನೀಲಗುಂದ ಪಾಲ್ಗೊಳ್ಳಲಿದ್ದು, ಸಂಗೀತ ಸೇವೆ ಗದಗ ವೀರೇಶ್ವರ ಪುಣ್ಯಾಶ್ರಮದ ಆನಂದ ಮಾನೆ, ಪೂರ್ವಾಚಾರಿ ಬಡಿಗೇರ ಇವರಿಂದ ಜರಗುವುದು ಎಂದು ಜಂಗಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸಯ್ಯ ಅಣ್ಣಿಗೇರಿಮಠ ಪ್ರಕಟಣೆಗೆ ತಿಳಿಸಿದ್ದಾರೆ.

ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ವಾರ್ಷಿಕೋತ್ಸವ

ಮಹಿಳೆಯರು ನವಸಮಾಜದ ರೂವಾರಿಗಳಾಗಬೇಕು

■ ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳೆಯರು ಇಂದು ಕಲೆ, ಸಾಹಿತ್ಯ, ಶಿಕ್ಷಣ, ತಂತ್ರಜ್ಞಾನ, ಕ್ರೀಡೆ ಇನ್ನಿತರೆ ಸರ್ವ ರಂಗಗಳಲ್ಲಿ ಮುಂದಿದ್ದಾರೆ. ಇವುಗಳ ಜೊತೆಯಲ್ಲಿ ಸಾಮಾಜಿಕ ಕ್ಷೇತ್ರದಲ್ಲೂ ಮಹಿಳೆಯರು ಮುಂದೆ ಬಂದು ಸಮಾಜದಲ್ಲಿರುವ ದೋಷಗಳನ್ನು ದೂರೀಕರಿಸಿ, ಅಹಿತಕರ ಘಟನೆಗಳನ್ನು ತಡೆಯಬೇಕಾಗಿದೆ. ಈ ಕಾರ್ಯ ಸಾಧನೆಯ ಶಕ್ತಿ ಮಹಿಳೆಯರಲ್ಲಿದೆ. ಮಹಿಳೆಯರು ಸುಸಂಸ್ಕೃತ ಮಕ್ಕಳನ್ನು ಬೆಳೆಸಿದರೆ ಅವರು ಸುಂದರ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿರುವರು ಎಂದು ಗದಗ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷೆ ಸುವರ್ಣಾ ಮದರಿಮಠ ಅಭಿಪ್ರಾಯಪಟ್ಟರು.

ಇಲ್ಲಿನ ಎಸ್.ವಾಯ್.ಬಿ.ಎಂ.ಎಸ್. ಯೋಗಪಾಠಶಾಲೆಯ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಸಿದ್ಧಲಿಂಗ ನಗರ ಗದಗ ಸಂಸ್ಥೆಯ 15ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಿಳೆ ಒಬ್ಬಂಟಿಗಳಾಗಿ ಕಾರ್ಯಗಳನ್ನು ಮಾಡುವುದು ಕಷ್ಟಕರ. ಇಂಥ ಸಂಘ-ಸಂಸ್ಥೆಗಳ ಜೊತೆಯಲ್ಲಿದ್ದರೆ ಅನೇಕ ಕಾರ್ಯಗಳನ್ನು ನೆರವೇರಿಸಲು ಸಾಧ್ಯ. ಆದ್ದರಿಂದ ಮಹಿಳೆಯರು ಸಮಾಜಮುಖಿ ಕಾರ್ಯಗಳನ್ನು ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ ಜಯಶ್ರೀ ವಸ್ತ್ರದ ಮಾತನಾಡಿ, ಒಂದು ವರ್ಷಕಾಲ ನಾನು ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಲು ಎಲ್ಲರೂ

ನೀಡಿದ ಸಲಹೆ-ಸೂಚನೆ, ಸಹಕಾರಗಳಿಗೆ ಸದಾ ಋಣಿಯಾಗಿರುವೆ. ತಾವು ನೀಡುವ ಸಹಕಾರಾವೇ ಸಂಸ್ಥೆಯ ಅಭಿವೃದ್ಧಿಗೆ ಆಧಾರವಾಗಿದೆ. ವ್ಯಕ್ತಿ ಶಕ್ತಿಯಾಗಿ ಬೆಳೆಯಲು ಸಂಸ್ಥೆಗಳು ಸಹಕಾರಿಯಾಗಿವೆ. ಸಂಸ್ಥೆಗಳನ್ನು ಬೆಳೆಸಿ, ತಾವೂ ಬೆಳೆಯಿರಿ ಎಂದು ಹೇಳಿದರು.

ಕಿತ್ತೂರ ರಾಣಿ ಚನ್ನಮ್ಮ ಪ್ರಶಸ್ತಿ ಪುರಸ್ಕೃತ ಮುಂಡರಗಿಯ ಮದರ ಥೆರೆಸಾ ಮಹಿಳಾ ಮಂಡಳದ ಅಧ್ಯಕ್ಷೆ ಮಂಜುಳಾ ಇಟಗಿಯವರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮಹಿಳೆಯರು ಮನೆಗೆಲಸಗಳೊಂದಿಗೆ ಏನಾದರೊಂದು ಸಾಧನೆ ಮಾಡಬೇಕು. ಸಾಧನೆಗೆ ಪರಿಸರ ಆಯ್ಕೆ ಮಾಡಿಕೊಂಡು ಸಾಧಿಸಬೇಕು. ನನ್ನ ಈ ಸಾಧನೆಗೆ ಯೋಗ ಸಾಧನೆ ಸ್ಫೂರ್ತಿ ನೀಡಿದೆ. ಕುಟುಂಬ ಸದಸ್ಯರ ಸಹಕಾರ, ಹಿರಿಯರ ಆಶೀರ್ವಾದ, ಯೋಗಾಚಾರ್ಯ ಕೆ.ಎಸ್. ಪಲ್ಲೇದರಂತಹ ಗುರು-ಹಿರಿಯರ ಮಾರ್ಗದರ್ಶನ ನಾನು ಪ್ರಶಸ್ತಿ ಪಡೆಯಲು ಪೂರಕವಾಗಿವೆ ಎಂದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಮುಂಡರಗಿ ಕೋಟೆ ಭಾಗ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ರೇಣುಕಾ ಚಿಂಚಲಿಮಠ ಮಾತನಾಡಿದರು. ಕೇಂದ್ರದ ಗೌರವಾಧ್ಯಕ್ಷೆ ಅನ್ನಪೂರ್ಣ ವರವಿ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ನಡೆಸಿದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮ ಯಶಸ್ಸಿಗೆ ದೇಣಿಗೆ ನೀಡಿದ ಮಹನೀಯರೆಲ್ಲರ ಪರವಾಗಿ ಮಹಾದಾನಿ ಗಿರಿಜಾ ನಾಲತ್ವಾಡಮಠರನ್ನು ಗೌರವಿಸಲಾಯಿತು.

ವಿಜಯಲಕ್ಷ್ಮೀ ಮೇಕಳಿ ಪ್ರಾರ್ಥನೆ ಹೇಳಿದರು. ಗೌರಿ ಜಿರಂಕಳಿ ಸ್ವಾಗತ ಕೋರಿದರು. ಸುಲೋಚನಾ ಐಹೊಳ್ಳಿ ಪರಿಚಯಿಸಿದರು. ಜಯಶ್ರೀ ಡಾವಣಗೇರಿ ವರದಿ ವಾಚನ ಮಾಡಿದರು. ಕಾರ್ಯದರ್ಶಿ ಶಾಂತಾ ಮುಂದಿನಮನಿ ಕಾರ್ಯಕ್ರಮ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಲೋಚನಾ ಕಾಲವಾಡಮಠ ಮತ್ತು ಸಂಗಡಿಗರು ವಚನ ಪ್ರಾರ್ಥನೆ ಹೇಳಿದರು. ಲಲಿತಾ ಕಡಗದ ಹಾಗೂ ಸಂಗಡಿಗರು ವಚನ ನೃತ್ಯ ಪ್ರದರ್ಶಿಸಿದರು. ವೀಣಾ ಮಾಲಿಪಾಟೀಲ ಭಾವಗೀತೆ ಹೇಳಿದರು. ಗಿರಿಜಾ ಅಂಗಡಿ ಮತ್ತು ಸಂಗಡಿಗರು ಕೋಲಾಟ ಪ್ರದರ್ಶಿಸಿದರು. ಶಾಂತಾ ಮುಂದಿನಮನಿ ಹಾಸ್ಯ ಚುಟುಕು ಹೇಳಿದರು. ವಿಜಯಲಕ್ಷ್ಮೀ ಆನೆಹೊಸೂರ ಎಂಬ ಜಾನಪದ ಮತ್ತು ಲಾವಣಿ ಹಾಡು ಹಾಡಿದರು. ಅರುಣಾ ಇಂಗಳಳ್ಳಿ ಮತ್ತು ಸಂಗಡಿಗರು ನೃತ್ಯ ರೂಪಕ ಯೋಗಾಸನ ಪ್ರದರ್ಶನ ನೀಡಿದರು. ವೀಣಾ ಗೌಡರ ಮಾತಿನ ಮಹತ್ವ ತಿಳಿಸಿದರು. ಸುನಂದಾ ಜ್ಯಾನೋಪಂತರ ಮತ್ತು ಸಂಗಡಿಗರು 'ತಿರುಗುಬಾಣ' ನಾಟಕ ಪ್ರದರ್ಶಿಸಿದರು.

ಶಾಂತಮ್ಮ ಹೆಗರಡ್ಡಿ ಅಭಿನಂದನಾ ಮತ್ತು ಬಿಳ್ಕೊಡುವ ಸಮಾರಂಭದಲ್ಲಿ ರವಿ ಗುಂಜೀಕರ

ಕ್ರಿಯಾಶೀಲತೆಯಿಂದ ಅಭಿವೃದ್ಧಿ ಒಲಿಯುತ್ತದೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ನಿರಂತರ ಕ್ರಿಯಾಶೀಲತೆ, ಶಿಸ್ತುಬದ್ಧ ವ್ಯಕ್ತಿತ್ವ, ಸಮಯ ಪಾಲನೆಯಿಂದ ಕರ್ತವ್ಯ ದಕ್ಷತೆ ಮೆರೆದರೆ ಮುಂಬಡ್ತಿಗಳು ತಾವೇ ಒಲಿದು ಬರಲಿವೆ ಎನ್ನುವುದಕ್ಕೆ ಲೆಕ್ಕ ಅಧೀಕ್ಷಕ ಹುದ್ದೆಯಿಂದ ಲೆಕ್ಕ ಪರಿಶೋಧನಾ ಅಧಿಕಾರಿ ಆಗಿರುವ ಶಾಂತಮ್ಮ ಹೆಗರಡ್ಡಿ ಉತ್ತಮ ಉದಾಹರಣೆ ಎನ್ನಬಹುದು ಎಂದು ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹಾಗೂ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಗುಂಜೀಕರ ಅಬಿಪ್ರಾಯಪಟ್ಟರು.

ನಗರದ ಸರಕಾರಿ ನೌಕರ ಭವನದಲ್ಲಿ ಶನಿವಾರ ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಿದ್ದ ಶ್ರೀಮತಿ ಶಾಂತಮ್ಮ ಹೆಗರಡ್ಡಿ ಅಭಿನಂದನಾ ಮತ್ತು ಬಿಳ್ಕೊಡುವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶ್ರೀಮತಿ ಶಾಂತಮ್ಮ ಹೆಗರಡ್ಡಿ ಅವರು 2006ರಲ್ಲಿ ಪ್ರಥಮದರ್ಜೆ ಲೆಕ್ಕ ಸಹಾಯಕರಾಗಿ ಸೇವೆಗೆ ಸೇರಿದರು. 2006ರಿಂದ 2016ರವರೆಗೆ ಗದಗ ಜಿಲ್ಲಾ ಪಂಚಾಯತ್‌ದಲ್ಲಿ, 2016ರಿಂದ 2024ರವರೆಗೆ 8 ವರುಷ ಲೆಕ್ಕ ಅಧೀಕ್ಷಕರಾಗಿ ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸೇವೆಯನ್ನ ಸಲ್ಲಿಸಿದ್ದಾರೆ. ತಮ್ಮ ಶಿಸ್ತಿನ ಸೇವೆಯ ಮೂಲಕ ಇದೀಗ ಗದಗ ಜಿಲ್ಲಾ ನೋಂದಣಿ ಇಲಾಖೆಗೆ ಲೆಕ್ಕ ಪರಿಶೋಧನಾ ಅಧಿಕಾರಿಯಾಗಿ ಮುಂಬಡ್ತಿ ಹೊಂದಿರುವುದು ಗದಗ ಜಿಲ್ಲಾ ಓಬಿಸಿ ಕಾರ್ಯಾಲಯಕ್ಕೆ ಅಭಿಮಾನ ಮತ್ತು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಓಬಿಸಿ ತಾಲೂಕು ಅಧಿಕಾರಿ ಡಾ. ಬಸವರಾಜ ಬಳ್ಳಾರಿ, ಸುರಕೋಡ, ಕುಲಕರ್ಣಿ, ಕಲ್ಮಠ, ಮಲ್ಲಿಕಾರ್ಜುನ ಹನಸಿ ಸೇರಿದಂತೆ ಸಿಬ್ಬಂದಿ ವರ್ಗವದವರಿದ್ದರು.

> ನಿರಂತರ ಪರಿಶ್ರಮ, ಕ್ರಿಯಾಶೀಲತೆ, ಸಮಯ ಪಾಲನೆ, ಶಿಸ್ತಿನ ವ್ಯಕ್ತಿತ್ವ, ಕರ್ತವ್ಯ ದಕ್ಷತೆ, ಸಾಮಾಜಿಕ ಹೊಣೆಗಾರಿಕೆ, ಸಾರ್ವಜನಿಕ ಸ್ಪಂದನೆ ಸೇರಿದಂತೆ ಹಲವು ಅಂಶಗಳನ್ನು ಸಾರ್ವಜನಿಕ ಆಡಳಿತ ಸೇವೆಯಲ್ಲಿ ಅಳವಡಿಸಿಕೊಂಡರೆ ಯಶಸ್ಸು ತಾನಾಗಿಯೇ ಹುಡುಕಿಕೊಂಡು ಬರಲಿದೆ ಎನ್ನುವುದಕ್ಕೆ ಶ್ರೀಮತಿ ಶಾಂತಮ್ಮ ಹೆಗರಡ್ಡಿ ಜೀವಂತ ನಿದರ್ಶನ ಎನ್ನಬಹುದೆಂದು ರವಿ ಗುಂಜೀಕರ ವರ್ಣಿಸಿದರು.

ಮುಂಡರಗಿ ತಾಲೂಕಿನ ನೌಕರರು, ಅಧಿಕಾರಿಗಳಿಗೆ ತಹಸೀಲ್ದಾರ ಧನಂಜಯ ಮಾಲಗಿತ್ತಿ ಸೂಚನೆ

ಕರ್ತವ್ಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸಿ

■ ವಿಜಯಸಾಕ್ಷಿ ಸುದ್ದಿ, ಡಂಬಳ

ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಸಂಬಂಧ ಚುನಾವಣಾ ಕೆಲಸ ಕಾರ್ಯಗಳನ್ನು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ 24*7 ಅವಧಿಯಲ್ಲಿ ಮುಂಡರಗಿ ತಾಲೂಕಿನ ಅಧಿಕಾರಿಗಳು, ನೌಕರರು ಕರ್ತವ್ಯ ನಿರ್ವಹಿಸುವಂತೆ ಮುಂಡರಗಿ ತಹಸೀಲ್ದಾರ ಧನಂಜಯ ಮಾಲಗಿತ್ತಿ ಸೂಚಿಸಿದ್ದಾರೆ.

ಈ ಕುರಿತು ಡಂಬಳ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳಿಗೆ ತೆರಳಿ ಚುನಾವಣೆ ಜರುಗುವ ಕೇಂದ್ರಗಳಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸುವುದರ ಮೂಲಕ ಮಾತನಾಡಿದ ಅವರು ಭಾರತ ಚುನಾವಣಾ ಆಯೋಗವು ಲೋಕಸಭಾ ಚುನಾವಣೆ ನಡೆಸಲು ವೇಳಾ ಪಟ್ಟಿ ಪ್ರಕಟಿಸಿದ್ದು, ಮಾ.16ರಿಂದ ಜೂನ್ 6ರ ವರೆಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಈಗಾಗಲೇ ಚುನಾವಣಾ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಜಿಲ್ಲಾ ಅಧಿಕಾರಿಗಳ ಸಲಹೆ ಸೂಚನೆಯಂತೆ ಸರ್ಕಾರಿ ಶಾಲಾ ಕಾಲೇಜುಗಳ ಅಧಿಕಾರಿಗಳು, ಸಿಬ್ಬಂದಿ ವರ್ಗ ವಿವಿಧ ತಂಡಗಳಲ್ಲಿ ಚುನಾವಣಾ ಕರ್ತವ್ಯ ನಿರ್ವಹಣೆಗೆ ನೇಮಕ ಮಾಡಿ ಆದೇಶಿಸಿದ್ದಾರೆ.

ತಾಲೂಕಿನ ಎಲ್ಲಾ ಇಲಾಖೆ ಹಾಗೂ ಅಧೀನ ಕಚೇರಿಯಗಳಲ್ಲಿ ಕರ್ತವ್ಯ

ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು, ನೌಕರರು ಯಾವುದೇ ರೀತಿಯಲ್ಲಿ ರಜೆ-ಯ ಮೇಲೆ ತೆರಳದೆ ಕೇಂದ್ರ ಸ್ಥಾನದಲ್ಲಿದ್ದು ಜಿಲ್ಲಾ ಚುನಾವಣಾಧಿಕಾರಿಗಳು ಕಚೇರಿಯಿಂದ ಕೋರುವ ವರದಿಗಳನ್ನು ಚಾಚೂ ತಪ್ಪದೇ ಸಲ್ಲಿಸಬೇಕಾಗಿರುವ ಕಾರಣ, ಮುಂಡರಗಿ ತಾಲೂಕಿನ ಸರ್ಕಾರಿ ಶಾಲಾ ಕಾಲೇಜುಗಳ ಎಲ್ಲಾ ಅಧಿಕಾರಿಗಳು ಹಾಗೂ ನೌಕರರು ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕು. ಅನಿವಾರ್ಯ ಅಥವಾ ತುರ್ತು ಸಂದರ್ಭಗಳಲ್ಲಿ ಯಾವುದೇ ಅಧಿಕಾರಿ, ನೌಕರರು ರಜೆಯ ಮೇಲೆ ತೆರಳಲು ಮತ್ತು ಕೇಂದ್ರ ಸ್ಥಾನವನ್ನು ಬಿಡಬೇಕಾದಲ್ಲಿ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಪೂರ್ವಾನುಮತಿ ಪಡೆದು ತೆರಳಬೇಕು.

> ಚುನಾವಣಾ ತುರ್ತು ಕೆಲಸ ಕಾರ್ಯಗಳ ನಿರ್ವಹಣೆ ಸಂಬಂಧ ಭಾರತ ಚುನಾವಣಾ ಆಯೋಗವು ಮತ್ತು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ಮತ್ತು ಜಿಲ್ಲಾಧಿಕಾರಿಗಳು ಕೋರುವ ವರದಿಗಳನ್ನು ನಿಗದಿತ ಸಮಯದೊಳಗೆ ಜಿಲ್ಲಾ ಕಚೇರಿಗೆ ಮಾಹಿತಿ ಒದಗಿಸಬೇಕಾಗಿರುವುದರಿಂದ ಮುಂಡರಗಿ ತಾಲೂಕಿನ ಅಧಿಕಾರಿ, ನೌಕರರು 24*7ಅವಧಿಯಲ್ಲಿ ಕೇಂದ್ರ ಸ್ಥಾನದಲ್ಲಿ ಹಾಜರಿದ್ದು ಚುನಾವಣಾ ತುರ್ತು ಕೆಲಸ ನಿರ್ವಹಿಸಬೇಕಾಗಿರುತ್ತದೆ ಎಂದು ತಹಸೀಲ್ದಾರರು ಹೇಳಿದರು.

ಒಂದು ವೇಳೆ ತಪ್ಪಿದಲ್ಲಿ ಚುನಾವಣಾ ಕರ್ತವ್ಯ ನಿರ್ಲಕ್ಷತೆ, ಬೇಜವಾಬ್ದಾರಿ ತೋರಿವುದು ಕಂಡು ಬಂದರೆ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಗಮನಕ್ಕೆ ತರಲಾಗುವುದು. ಚುನಾವಣಾ ಕರ್ತವ್ಯ ಲೋಪ ಎಸಗಿದ ನೌಕರರು ವಿರುದ್ಧ ಪ್ರಜಾ ಪ್ರಾತಿನಿಧ್ಯ ಕಾಯ್ದೆಯನ್ವಯ ಶಿಸ್ತಿನ ಕ್ರಮಕ್ಕೆ ಒಳಗಾಗುತ್ತಾರೆ ಎಂದು ತಹಸೀಲ್ದಾರ ಧನಂಜಯ ಮಾಲಗಿತ್ತಿ ಹೇಳಿದರು.

ಅಳ್ನಾವರ ಪಟ್ಟಣದಲ್ಲಿ ಮತದಾರರ ಜಾಗೃತಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಮತದಾನ ಮಾಡುವುದು ಪ್ರತಿಯೊಬ್ಬ ನಾಗರಿಕನ ಹಕ್ಕು. ಇದನ್ನು ಪ್ರತಿಯೊಬ್ಬರೂ ಚಲಾಯಿಸಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕೆಂದು ಜಿಲ್ಲಾ ಪಂಚಾಯತ ಸಿಇಒ ಹಾಗು ಸ್ವೀಪ್ ನೋಡಲ್ ಅಧಿಕಾರಿ ಸ್ವರೂಪ ಟಿ.ಕೆ. ಅವರು ಕರೆ ನೀಡಿದರು.

ಡೊಳ್ಳಿನ ಕಲಾತಂಡಗಳ ಮೂಲಕ ಹಾಗೂ ಸ್ವಸಹಾಯ ಗುಂಪಿನ ಸದಸ್ಯರ ಕುಂಭಮೇಳದೊಂದಿಗೆ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಆಜಾದ್ ಮುಖ್ಯ ರಸ್ತೆಯಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ಮತದಾರರಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

ಜಿಲ್ಲಾ ನಗರ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ. ರಮೇಶ, ಅಳ್ನಾವರ ತಾಲೂಕಿನ ತಹಸೀಲ್ದಾರ್ ಬಸವರಾಜ ಬೆಣ್ಣೆಶಿರೂರು, ಅಳ್ನಾವರ ತಾ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ ತುರ್ಕಾಣಿ, ಅಳ್ನಾವರ ಪ.ಪಂ ಮುಖ್ಯಾಧಿಕಾರಿ ಪ್ರಕಾಶ ಮಗುದುಮ, ಸ್ವಸಹಾಯ ಸಂಘದ ಸದಸ್ಯರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು, ಪ.ಪಂನ ಎಲ್ಲ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶೇರವಾಡ, ಸಂಗಟಿಕೊಪ್ಪ, ಕೃವಿವಿ ಚೇಕ್‌ಪೋಸ್ಟ್‌ಗಳಲ್ಲಿ ಒಟ್ಟೂ 6,89,500 ರೂ ಹಣ ಸೀಜ್

ಚೆಕ್‌ಪೋಸ್ಟ್‌ಗಳಲ್ಲಿ ಅಪಾರ ನಗದು ವಶಕ್ಕೆ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಸ್ಥಾಪಿಸಿರುವ ಜಿಲ್ಲೆಯ 24 ಚೇಕ್ ಪೋಸ್ಟ್‌ಗಳಲ್ಲಿ ಪ್ರತಿ ವಾಹನಗಳನ್ನು ತೀವ್ರ ತಪಾಸಣೆ ಮಾಡಲಾಗುತ್ತಿದ್ದು, ಮೂರು ಚೇಕ್ ಪೋಸ್ಟ್‌ಗಳಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ, ಸರಿಯಾದ ದಾಖಲೆ ಹೊಂದಿರದ ಒಟ್ಟು 6,89,500 ರೂ.ಗಳ ನಗದು ಹಣವನ್ನು ಸೀಜ್ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಲೋಕಸಭೆ ಚುನಾವಣೆ ಘೋಷಣೆಯಾದ ಮಾರ್ಚ್ 16ರಿಂದ ಚೆಕ್ ಪೋಸ್ಟ್‌ಗಳನ್ನು ತರೆದು ವಾಹನಗಳನ್ನು ತಪ